# ಹಿಂದು ವಾಣಿ

hinduvani@yahoo.com

ಶ್ರೀ ಹೇವಿಳಂಬಿ ಸಂವತ್ಸರ
ಆಶ್ವಯುಜ - ಕಾರ್ತಿಕ

ಅಕ್ಟೋಬರ್ - 2017

ಗೌರವ ಸಂಪಾದಕ
ಟಿ.ಎ.ಪಿ. ಶೆಣೈ

ಪ್ರಕಾಶಕರು
ಎನ್. ಪಿ. ಮುನಿರಾಜು
ವಿಶ್ವ ಹಿಂದು ಪರಿಷದ್, ಕರ್ನಾಟಕ
'ಧರ್ಮಶ್ರೀ', 91, ಶಂಕರಪುರಂ,
ಶಂಕರಮಠ ಸಮಾನಾಂತರ ರಸ್ತೆ
ಬೆಂಗಳೂರು – 560 004
ದೂ. 080–26604641

ಪ್ರಸಾರ ಸಲಹೆ
ಕೆ. ಪರಮೇಶ್ವರ ಹೆಬ್ಬಾರ್
ಹೆಚ್.ಎಸ್. ಸೀತಾರಾಮು
ರಮೇಶ ಡಿ.
ಕೆ. ಅಶ್ವತ್ಥನಾರಾಯಣ
ಶಿವಕುಮಾರ ಮೇಲ್ನಾಡ್
ಶಿವಕುಮಾರ ಬೋಳ್‌ಶೆಟ್ಟಿ

ಚಂದಾವಿವರ
ಬಿಡಿ ಪ್ರತಿ ರೂ. 10/–
ವಾರ್ಷಿಕ ಚಂದಾ ರೂ. 100/–
ದ್ವೈವಾರ್ಷಿಕ ಚಂದಾ ರೂ. 200/–

ಮುದ್ರಕರು
ರಾಷ್ಟ್ರೋತ್ಥಾನ ಮುದ್ರಣಾಲಯ
ಕೇಶವಶಿಲ್ಪ, ಬೆಂಗಳೂರು 560 019
rmudrana@gmail.com


## ಸೂಕ್ತಿಶ್ರೀ

# ಜೀವನಕ್ಕೂ ಅಳವಡಿಸಬೇಕು

**ರಾಮನ ಮಹಿಮೆಯ ಅತಿಶಯವಾಗಿಸಿ**
**ನಾಮವ ಜಪಿಸುತ, ಮರೆತಿಹರು**
**ರಾಮನ ಶಕ್ತಿಯ, ಶೀಲವ, ಸುಂದರ**
**ಪ್ರೇಮವ ಜೀವನಕಳವಡಿಸೆ**

ಭಗವಾನ್ ಶ್ರೀರಾಮನು ಮರ್ಯಾದಾ ಪುರುಷೋತ್ತಮ ಧರ್ಮದ ಸಂರಕ್ಷಕ. ನಮಗೆ, ಗೃಹಧರ್ಮ, ಸಮಾಜಧರ್ಮ, ರಾಷ್ಟ್ರ ಧರ್ಮದ ಮೇಲ್ಪಂಕ್ತಿ ಹಾಕಿಕೊಟ್ಟ, ಧೀರೋದಾತ್ತ ನಾಯಕ. ಸಂಬಂಧಗಳ ನಾಯಕ. ಸಂಬಂಧಗಳ, ಸೂಕ್ಷ್ಮತೆಯನ್ನು ಸಮಾಜಕ್ಕೆ ತಿಳಿಸಿಕೊಟ್ಟ ಸೂಕ್ಷ್ಮಮತಿ. ರಾಷ್ಟ್ರಕ್ಕಾಗಿ, ಜನರ ಭಾವನೆಗಳಿಗೆ ಮನ್ನಣೆ ಕೊಟ್ಟು, ತನ್ನ ಪತ್ನಿಯನ್ನೇ ತ್ಯಜಿಸಿದ ತ್ಯಾಗಮೂರ್ತಿ. ರಾಮಚರಿತದಲ್ಲಿ ನಾವು ಅವನ ಶಕ್ತಿ, ಶೀಲ ಮತ್ತು ಸೌಂದರ್ಯದ ಸಮನ್ವಯವನ್ನು ಕಾಣುತ್ತೇವೆ. ಕೋಲ–ಕಿರಾತ–ಶಬರರಲ್ಲಿ ರಾಮನಿಗಿರುವ ಪ್ರೀತಿ, ಶರಣಾಗತರನ್ನು ರಕ್ಷಿಸುವ ಗುಣ, ನಿಸ್ಪೃಹತೆ, ತಾನು ಗೆದ್ದ ಲಂಕೆಯನ್ನು ವಿಭೀಷಣನಿಗೆ ಕೊಡುವುದೇ ಮುಂತಾದ ದಿವ್ಯಗುಣಗಳನ್ನು ನಾವು ರಾಮನಲ್ಲಿ ಕಾಣುತ್ತೇವೆ.

ನಾವಿಂದು ರಾಮಧ್ಯಾನ, ಭಜನೆ, ಕೀರ್ತನೆಗಳನ್ನು ಮಾಡುತ್ತೇವೆ. ಮರ್ಯಾದಾ ಪುರುಷೋತ್ತಮನಿಗೆ ಮಂದಿರ ನಿರ್ಮಿಸಲು ಬಯಸಿದ್ದೇವೆ. ಶ್ರೀರಾಮನು ಆದರ್ಶ ಪುರುಷ. ಶತ–ಶತ ಭಾರತೀಯರ ಶ್ರದ್ಧಾ ಕೇಂದ್ರ. ಆದರೆ ನಮ್ಮ ರಾಮಭಕ್ತಿಯು ಕೇವಲ ಬಾಹ್ಯಾಡಂಬರವೋ, ಎಂಬ ಶಂಕೆ ಮೂಡುತ್ತಿದೆ.

ನಾವು ರಾಮನ ಪ್ರೇಮಪೂರ್ಣ ವ್ಯವಹಾರ, ಒಬ್ಬ ಪುತ್ರನಾಗಿ, ಸಹೋದರನಾಗಿ, ಮಿತ್ರನಾಗಿ, ಶರಣಾಗತ ವತ್ಸಲನಾಗಿ ವರ್ತಿಸಿದ ಅವನ ಶೀಲಗಳನ್ನು ಮರೆತಂತಿದೆ. ರಾಮಭಕ್ತರಾದ ನಾವು ರಾಮನ ವಿಶಿಷ್ಟ ಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ನಮ್ಮ ರಾಮಭಕ್ತಿಯು ಸಾರ್ಥಕವಾಗುವುದು. ರಾಮ ಭರತರ ಭ್ರಾತೃ ಪ್ರೇಮವು ವಿಶ್ವಕ್ಕೇ ಮಾದರಿಯಾದುದು. ರಾಮನ ಗುರುಭಕ್ತಿ, ಮೇರೆಯನ್ನು ಎಲ್ಲಿಯೂ ಮೀರದ ಅವನ ಜೀವನ, ಅಮೋಘವಾದುದು.

ಇಂದು ರಾಮಭಕ್ತರಾದ ಅದೆಷ್ಟೋ ಅಣ್ಣ–ತಮ್ಮಂದಿರು, ಆಸ್ತಿಗಾಗಿ, ಧನಕ್ಕಾಗಿ ಒಬ್ಬರು ಇನ್ನೊಬ್ಬರ ರಕ್ತ ಪಿಪಾಸುಗಳಾಗಿರುವುದನ್ನು, ನಾವು ನೋಡುತ್ತಿದ್ದೇವೆ. ಶ್ರೀರಾಮನ ಶಕ್ತಿ–ಶೀಲ–ಸೌಂದರ್ಯಗಳನ್ನು ನಾವೆಲ್ಲರೂ ನಿಜ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ, ಭಾರತವು ರಾಮರಾಜ್ಯವಾಗುವುದು. ಕೇವಲ ರಾಮನಾಮ ಜಪದಿಂದ, ಯಾವುದೇ ಪ್ರಯೋಜನವೂ ಇಲ್ಲ. ರಾಮನಾಮವು ಭಾರತೀಯರ ಶಕ್ತಿ ಮತ್ತು ಮುಕ್ತಿಗಿರುವ ತಾರಕ ಮಂತ್ರವಾಗಿದೆ. ರಾಮನಾಮವು ಸದಾಕಾಲ ಬೆಳಕನ್ನು ನೀಡುವ ಮಣಿದೀಪವಾಗಿದೆ. ಇದಕ್ಕೆ ಎಣ್ಣೆ – ಬತ್ತಿಗಳ ಅವಶ್ಯಕತೆ ಇಲ್ಲ. “ರಮಂತೆ, ಯೋಗಿನೋನಂತೆ, ನಿತ್ಯಾನಂದೆ, ಸದಾತ್ಮನಿ” ಸದಾಕಾಲ ಸಮಸ್ತ ಪ್ರಾಣಿಗಳಲ್ಲಿ ರಮಿಸುವವನೇ ರಾಮ.

– ಡಿ ವಿಷ್ಣುಭಟ್ಟ

# ಪಾಕಿಸ್ತಾನಿಗಳನ್ನು ಹೊರದಬ್ಬಲು ಕಾಯುತ್ತಿರುವ ದೇಶಗಳು



ಜಗತ್ತಿನ 134 ದೇಶಗಳು ಕಳೆದ ನಾಲ್ಕು ವರ್ಷಗಳಲ್ಲಿ 5,44,105 ಪಾಕಿಸ್ತಾನಿಗಳನ್ನು ಉಚ್ಚಾಟಿಸಿವೆ. ಅವುಗಳಲ್ಲಿ ಸೌದಿ ಅರೆಬಿಯಾ, ಅರಬ್ ದೇಶಗಳ ಒಕ್ಕೂಟ (ಯು.ಎ.ಈ) ಓಮನ್ ದೇಶಗಳು ಮುಂಚೂಣಿಯಲ್ಲಿವೆ. ಸೌದಿ ಅರೇಬಿಯಾದದಿಂದ 2,80,052 ಪಾಕಿಸ್ತಾನಿಗಳನ್ನು ಹೊರದಬ್ಬಲಾಗಿದೆ. ಅವುಗಳಲ್ಲಿ ಲಾವೋಸ್, ಟೊಗೊ, ಗಿನಿಯಾ, ಲೈಬಿರಿಯಾ ಮಡಗಾಸ್ಕರ್, ಅಂಗೋಲಾ, ಇಥಿಯೋಪಿಯಾಗಳಂತಹ ಸಣ್ಣ ದೇಶಗಳು ಸೇರಿವೆ. ಇಂಗ್ಲೆಂಡಿನ 13,700 ಅಮೆರಿಕಾದಿಂದ 832 ಫ್ರಾನ್ಸಿನಿಂದ 798 ಸ್ಪೈನ್‌ನಿಂದ 408 ಪಾಕ್ ಜನರು ಹೊರಹೋಗಬೇಕಾಯಿತು. ಮುಸ್ಲಿಂ ದೇಶಗಳಾದ ಮಲೇಶಿಯಾದಿಂದ 16,124 ಇರಾನಿನಿಂದ 16,593 ಟರ್ಕಿಯಿಂದ 9776 ಪಾಕಿಸ್ತಾನಗಳು ದೇಶ ತ್ಯಜಿಸಬೇಕಾಯಿತು.

ವೀಸಾದಲ್ಲಿ ನಮೂದಿಸಿದ ಅನುಮತಿಗಿಂತ ಹೆಚ್ಚುಕಾಲ ವಾಸಿಸಿರುವುದು ಇದಕ್ಕೆ ಮುಖ್ಯ ಕಾರಣವಾಗಿದ್ದರೆ ಅಕ್ರಮ ವಲಸೆ ಮತ್ತು ಇತರೆ ಅಕ್ರಮ ಪ್ರವೇಶಗಳೂ ಈ ತೀವ್ರಕ್ರಮಕ್ಕೆ ಕಾರಣವಾಗಿವೆ.




ಕ್ಷೇತ್ರದರ್ಶನ
33 ಶ್ರೀ ರಾಜರಾಜೇಶ್ವರೀ ದೇವಿಯ ಪೊಳಲಿ ಕ್ಷೇತ್ರ

11 ಪ್ರಚಲಿತ : ನನ್ನ ಮಗಳು ನನಗೆ ಬೇಕು

15 ಜನಮನಗಳಲ್ಲಿ ನೆಲೆಸಿದ ಸರ್.ಎಂ. ವಿಶ್ವೇಶ್ವರಯ್ಯ

17 ತಿರುಕೋಯಿಲೂರ

19 ಆಕೆಗೆ ಏನು ಮಾಡಬೇಕೆಂದು ಹೇಳಬಾರದಂತೆ !

21 ಬಾಳ ತೆರೆ ಎಳೆದು ನಿರ್ಗಮಿಸಿದ ಬಾಳಪ್ಪ

32 ಗಿಳಿಪಾಠ


**ಎಂದಿನಂತೆ**


1 ಸೂಕ್ತಿಶ್ರೀ
ಜೀವನಕ್ಕೂ ಅಳವಡಿಸಬೇಕು

5 ಸಂಪಾದಕೀಯ
ನಾಸ್ತಿಕರು ಧರ್ಮಸ್ಥಾಪನೆಗೆ ಹೊರಟಾಗ

8 ಪ್ರಾಚೀನ ಕನ್ನಡಕಾವ್ಯ ಪರಿಚಯ
ಲಕ್ಷ್ಮೀಶ ಕವಿಯ ಜೈಮಿನಿ ಭಾರತ

23 ಹಿರಿಯರು
ಜನತೆಯ ರಾಣಿ ಅಹಲ್ಯಾಬಾಯಿ ಹೋಳ್ಕರ್

26 ವಿಶ್ವ ಹಿಂದು ವಾರ್ತಾ

29 ನೀವೆಷ್ಟು ಬುದ್ಧಿವಂತರು

30 ಶಬ್ದಶೋಧ – 128

36 ಪ್ರಸ್ತುತ
ಕಾವೇರಿಗೆ ಪುಷ್ಕರ





**ಮುಖಪುಟ :** **ಸ್ಥಾಪನಾ ದಿನ ಆಚರಣೆ–ತುರುವೆಕೆರೆ, ಪುಟ** 18,
**ಸಾಮೂಹಿಕ ಗೌರಿ ಗಣೇಶ ಪೂಜೆ–ಮೈಸೂರು ಪುಟ** 14,



## ನಕಾರಾತ್ಮಕ ಮನೋಧರ್ಮ

ಹಿಂದೂವಿರೋಧವೇ ಸಾಮಾಜಿಕ ಕಳಕಳಿಯೆನಿಸುವುದು, ದೇಶ ವಿರೋಧದ ನಿರ್ಧಾರಗಳು ಪ್ರಗತಿಪರವೆನಿಸುವುದು, ಧರ್ಮದ ಅವಹೇಳನವನ್ನು ಮುತ್ಸದ್ದಿತನವೆನ್ನುವುದು ಈ ಕಾಲದ ವಿಚಿತ್ರವಾಗಿದೆ. ಸಂಪಾದಕೀಯದಲ್ಲಿ ಕಾಲೇಜು ವಿದ್ಯಾರ್ಥಿನಿಯ ಮಾತುಗಳನ್ನು ಹಲವು ಹಿರಿಯರೆನಿಸಿರುವ ರಾಜಕೀಯ ನಾಯಕರ ಮಾತುಗಳೊಂದಿಗೆ ಹೋಲಿಸಿ ಅವರೆಲ್ಲರೂ ಆ ಕಿಶೋರಿ ವಿದ್ಯಾರ್ಥಿನಯಿಂದ ಕಲಿಯಲಿಕ್ಕಿರುವುದನ್ನು ನೆನಪಿಸಿದೆ.

**– ಬಸವರಾಜು ಗಂಗಾವತಿ**

## ಲವ್‌ಜಿಹಾದ್ ಎನ್ನುವ ವಿಷ

ಕಾನೂನನ್ನು ಎಗರಾಯಿಸಿ ಗೆಲ್ಲುತ್ತಿರುವ ಲವ್‌ಜಿಹಾದಿನ ವಾಸ್ತವಿಕ ಕಟು ಪರಿಣಾಮವನ್ನು ಈಗ ನ್ಯಾಯಾಲಯಗಳೂ ಅರ್ಥಮಾಡಿಕೊಂಡು ಕಾನೂನಿನ ಬಾಹುಗಳನ್ನು ಚಾಚುತ್ತಿರುವುದು ಈಚೆಗಿನ ಆರೋಗ್ಯಕರ ಬೆಳವಣಿಗೆಯಾಗಿದೆ. ಮುಸ್ಲಿಂ ದುರಾಕ್ರಮಣದ ಇತಿಹಾಸವನ್ನು ಇನ್ನಾದರೂ ಅರಿತು ಹಿಂದು ಸಮಾಜವು ಕಾರ್ಯಪ್ರವೃತ್ತವಾದರೇನೇ ನ್ಯಾಯಾಲಯಗಳ ತೀರ್ಪುಗಳು ಕಾರ್ಯಗತವಾಗಲು ಸಾಧ್ಯವೇನೋ.

**– ಕರುಣಾಕರನ್ ಅತ್ತಿಬೆಲೆ ಬೆಂಗಳೂರು**

## ಶಾಂತಿದೂತರಾಗಬಲ್ಲರೇ ಶಿಯಾ ಮುಸ್ಲಿಮರು

ಹಿಂದುಗಳ ಒಟ್ಟಭಿಪ್ರಾಯಗಳನ್ನು ವಿರೋಧಿಸುವುದೇ ಮುಸ್ಲಿಮನ ಮೊದಲ ಲಕ್ಷಣವಾಗಬೇಕು ಎನ್ನುವ ಮುಸ್ಲಿಂ ಮನೋಭಾವವನ್ನು ಧಿಕ್ಕರಿಸಿ ಭಾರತದಲ್ಲಿ ಒಂದಾಗಿ ಬಾಳಲು ಸಿದ್ಧ ಎನ್ನುವುದನ್ನು ಮುಸ್ಲಿಮರ ಶಿಯಾ ಪಂಗಡ ತನ್ನ ಹೇಳಿಕೆಯಲ್ಲಿ ತೋರಿಸಿಕೊಟ್ಟಿದೆ. ಅಕ್ಕಪಕ್ಕದಲ್ಲಿ ಮಂದಿರವೂ ಮಸೀದಿಯೂ ತಲೆ ಎತ್ತುವುದು ಮುಂದೆಂದಿಗೂ ಅಶಾಂತಿಯನ್ನು ಸೃಷ್ಟಿಸಲು ಅವಕಾಶ ನೀಡಿದಂತೆ ಎಂದು ಹೇಳಿ ಶಿಯಾ ಪಂಗಡವು ವಾಸ್ತವಿಕತೆಯನ್ನು ಅರಿತ ಪ್ರಬುದ್ಧತೆಯನ್ನು ಪ್ರದರ್ಶಿಸಿದೆ. ಸಮಸ್ತ ಮುಸ್ಲಿಂ ಸಮಾಜವು ಈ ಕಾಲದಲ್ಲಿ ತನ್ನ ಸೌಹಾರ್ದಯುತ ಮನೋಭಾವವನ್ನು ಪ್ರದರ್ಶಿಸುವುದು ಸೂಕ್ತ.

**– ವಿಶ್ವೇಶ್ವರ ಶಾಸ್ತ್ರೀ ಕೊಳ್ಳೆಗಾಲ**

## ಅಭಿವೃದ್ಧಿ ಎಂದರೆ ಸ್ವರ್ಗವೇ?

ಸ್ವರ್ಗವೆಂಬ ವರ್ಣನೆಯಲ್ಲಿ ಎಲ್ಲಾ ಭೌತಿಕ ಸುಖಸಮೃದ್ಧಿಯ ವಿಚಾರಗಳು ಕಂಡು ಬರುತ್ತವೆ. ಆದರೆ ಲೌಕಿಕ ಸುಖವೇ ಅಂತಿಮವಲ್ಲ ಎನ್ನುವುದನ್ನು ಎಲ್ಲಾ ಕಾಲದ ತಾತ್ವಿಕರು ವಿವರಿಸುತ್ತಲೇ ಬಂದರು. ಸಂತೃಪ್ತಿಯು ತರುವ ಆನಂದಕ್ಕೂ, ಭೋಗಗಳು ತಂದುಕೊಡುವ ಸಂತೋಷಕ್ಕೂ ಸಂಬಂಧವೇ ಇರದು. ಇಂದಿನ ಕೊಳ್ಳುಬಾಕ ಯುಗದಲ್ಲಿ ಆನಂದದ ಮತ್ತು ಸಂತೋಷದ ತಾಳಮೇಳಗಳು ತಪ್ಪಿಬಿಟ್ಟಿವೆ. ಪ್ರಸ್ತುತ 'ಇಲ್ಲೇ ಸ್ವರ್ಗ'ವು ಇದನ್ನು ಯಥಾವತ್ತಾಗಿ ಮನಗಾಣಿಸುವ ಪ್ರಯತ್ನವನ್ನು ಮಾಡಿದೆ.

**– ಜಯಲಲಿತಾ ಚಿಕ್ಕಮಗಳೂರು**

# ನಾಸ್ತಿಕರು ಧರ್ಮಸ್ಥಾಪನೆಗೆ ಹೊರಟಾಗ

ನಾಯಿ ಸಾಕಿದವರನ್ನು ಕೇಳಿ ಬೇಕಾದರೆ ! ಒಂದಿಷ್ಟು ಸಮಯ ಅದು ನಮ್ಮ ಕಡೆ ಬೊಗಳುವುದನ್ನು ನೀವು ಸಹಿಸಿಕೊಂಡರೆ ಸಾಕು. ಅದರ ಗೊಡವೆಯನ್ನೇ ಬಿಟ್ಟುಬಿಟ್ಟೆವು ಎಂದು ಅದಕ್ಕೆ ಅರಿವಾದರೆ ಸಾಕಂತೆ. ಅದು ಬೊಗಳುವುದನ್ನೇ ನಿಲ್ಲಿಸಿಬಿಡುತ್ತದೆ. ಅಷ್ಟೇ ಅಲ್ಲ ಸ್ವಲ್ಪಹೊತ್ತಿನ ನಂತರ ಕುಂಯಿಗುಡುತ್ತಾ ಹತ್ತಿರ ಬರುತ್ತದೆ. ನಮ್ಮ ಬಳಿ ತಿನ್ನುವುದೇನಾದರೂ ಸಿಗಬಹುದೇನೋ ಎಂದು ದೈನೇಸಿಯಾಗಿ ಕಾಯುತ್ತಾ ನಿಂತಿರುತ್ತದೆ.

ರಾಷ್ಟ್ರೀಯ ಸ್ವಯಸೇವಕ ಸಂಘದಿಂದ ಹಿಡಿದು ಪರಿವಾರದ ಸಂಘಟನೆಗಳೆಲ್ಲವೂ ಕಳೆದ ಒಂಭತ್ತು ದಶಕಗಳಿಂದ ಕಂಡುಕೊಂಡ ವಾಸ್ತವವೂ ಇದೇ ರೀತಿಯದು. ವಿಚಾರವಾದಿಗಳು ಎಂದು ಕರೆಸಿಕೊಂಡವರೆಲ್ಲಾ ಬೊಗಳುವುದೇ ತಮ್ಮ ಕರ್ತವ್ಯ ಎಂದುಕೊಂಡಿರುವರು. ಒಂದು ಕಡೆ ಬೊಗಳುವ ಸದ್ದು ಕೇಳಿದರೆ ಸಾಕು, ನಾಯಿಗಳು ಒಂದೇ ಸಮನೆ ಮುಖ್ಯ ಗಾಯಕನಗೆ ಶ್ರುತಿಕೊಡುವ ಪೆಟ್ಟಿಗೆಯಂತೆ, ಪಕ್ಕ ವಾದ್ಯದ ಹಿಂಬಾಲಿಕೆಯಂತೆ ಸೇರಿಕೊಂಡು ಬಿಡುತ್ತವೆ. ಕೆಲವೊಮ್ಮೆ ಕರ್ಕಶವಾಗಿ ಪ್ರಸ್ತುತಪಡಿಸುವ ಬೀದಿ ಆರ್ಕೆಸ್ಟ್ರಾದಂತೆ ಶ್ರುತಿಮೇಳವನ್ನು ಬಿಟ್ಟು ಕಿರುಚುತ್ತವೆ. ಅಷ್ಟೊಂದು ಕಾಲ ಸಮಯ ; ತಾನು ಕೆಲಸವಿಲ್ಲದೆ ಓಡುವ, ಸಿಕ್ಕಿದುದನ್ನು ತಿನ್ನುವ, ಸುಮ್ಮಸುಮ್ಮನೆ ನಿಂತು ಮೂಸುವ ಕಸುಬನ್ನು ಬಿಟ್ಟುಬಿಡುತ್ತವೆ.

ಆಗಾಗ ಈ ಬೀದಿಬೊಗಳು ತಾರಕಕ್ಕೆ ಏರಿ ಬಿಡುತ್ತದೆ. ಈಗೊಂದು ಅಂತಹ ಸಂದರ್ಭ ನಾಯಿಗಳಿಗೆ ಒದಗಿಬಂದಿದೆ. ಅದಕ್ಕಾಗಿ ದೇವಸ್ಥಾನದ ಒಳಬರದೇನೇ ಗರ್ಭಗುಡಿಯ ಕುರಿತು ಗೀಚುವ ಪ್ರಶಸ್ತಿ ಪುಳಕ ನಾಯಿಗಳೀಗ ತಾವು ವಿಚಾರವಾದಿಗಳೆಂದೂ ಬರಹಗಾರರೆಂದೂ ಸಿದ್ಧಪಡಿಸಲು ಶ್ರದ್ಧಾಂಜಲಿಯ ಸಭೆಗಳನ್ನು ಹವಣಿಸುತ್ತಿವೆ. ಇಂತಹ ಸಭೆಗಳು ಹೊಲಸು ತಿನ್ನುವ ಕಾಗೆಗೆ ಸಿಗುವ ಮೃಷ್ಟಾನ್ನದಂತೆ ಮಾರ್ಪಡುತ್ತವೆ. ಒಂದು ಕಾಗೆಯ ಕೂಗಿಗೆ ಕೇರಿಯ ನೂರಾರು ಕಾಗೆಗಳು ಒಂದೆಡೆ ಸೇರುತ್ತವೆ. ತಮ್ಮವರು ಸಾಯಲೆಂದು ; ಅದರಲ್ಲೂ ಅವರು ದಾರುಣವಾಗಿ ಸಾವಿಗೀಡಾದರೇನೇ ಪತ್ರಿಕೆಗಳಲ್ಲಿ ತಮ್ಮ ಹೆಸರು ಕಾಣಿಸಿಕೊಳ್ಳಬಹುದೆಂದುಕೊಳ್ಳುವವರು ಅದಕ್ಕಾಗಿಯೇ ಕಾಯುತ್ತಿದ್ದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಹಾಗಾಗಿಯೇ ಇರಬೇಕು. ಇಂತಹ 'ಆಸ್ಥಾನ ವಿದ್ವಾಂಸರ' ಆಶ್ರಯ ದಾತರಿರುವ ರಾಜ್ಯಗಳಲ್ಲೇ ಇಂತಹ ಕೊಲೆಗಳು ನಡೆಯುತ್ತಿರುತ್ತವೆ ಹಾಗೂ ಅವುಗಳು ಪತ್ತೆಯಾಗದೆ ಉಳಿಯುತ್ತವೆ.

ಪುರಂದರ ದಾಸರು ಉದರ ವೈರಾಗ್ಯವಿದು ಕೀರ್ತನೆಯಲ್ಲಿ ಈ ಉದರಂಭಟರ ವೈರಾಗ್ಯದ ಪರಿಯನ್ನು ವರ್ಣಿಸಿರುವರು. ಸಿಕ್ಕಿದ ಅವಕಾಶಗಳೆಲ್ಲವನ್ನೂ ತಮ್ಮ ಹೊಟ್ಟೆಪಾಡಿನ ಉದ್ಯೋಗವಾಗಿ ಮಾರ್ಪಡಿಸುವ ಇವರಿಗೆ ಐವತ್ತು ವರ್ಷಗಳಿಂದ ಕನ್ನಡ ಜನರು ಒಪ್ಪಿದ ಕನ್ನಡ ಧ್ವಜವು ಕೈಗೆ ಸಿಕ್ಕಿತು. ಅದರ ಆಕಾರ ಬಣ್ಣಗಳನ್ನು ತಮ್ಮ ಸ್ವಭಾವಕ್ಕೆ ಒಗ್ಗಿಸಿ

ಹಾರಿಸಬೇಕೆಂದುಕೊಂಡವರಿಗೆ ಹಾದಿ ಮಧ್ಯದಲ್ಲಿ ಅಪಶಕುನಗಳೇ ಕಾಣಲಾರಂಭಿಸಿದವು. ಹಾಗಾಗಿ ಅದನ್ನು ಸಾಕಷ್ಟು ಸಮಯ ಎಳೆದು ಜಗ್ಗಿ ಅನಾಹುತಗಳೇ ಹೆಚ್ಚು ಎಂದು ಅರಿವಾದಾಗ ಕೈಬಿಟ್ಟರು.

ಮಹಾತ್ಮಾಗಾಂಧಿಯವರೇ ರಾಜಋಷಿಯೆಂದು ಕರೆದ ನಾಲ್ವಡಿ ಕೃಷ್ಣರಾಜ ಒಡೆಯರು ಇಂತಹ ಹೊಲಸುಬಾಯಿಗೆ ಸಿಕ್ಕಿಹಾಕಿಕೊಂಡರು. ಅವರನ್ನು ಏಕವಚನದಲ್ಲಿ ಕರೆದು ತಾನು ಮಹಾರಾಜನೆನಿಸಿಕೊಳ್ಳಬಹುದೆಂದುಕೊಂಡ ಲೆಕ್ಕಾಚಾರವೂ ಮತ್ತೆ ತಪ್ಪಾಗಿ ಪರಿಣಮಿಸಿತು. ಅದಕ್ಕಾಗಿ ಆರಿಸಿಕೊಂಡ ಸಮಯವೂ ಯಮಗಂಡಕಾಲವಾಗಿದ್ದಿತು. ನಾಡಹಬ್ಬ ದಸರಾ ಬರುತ್ತಿದ್ದಂತೆ ಮಹಾರಾಜರ ಉಸಾಬರಿಯನ್ನು ಮೈಮೇಲೆ ಎಳೆದುಕೊಂಡು ಬೀದಿ ಪಾಲಾಗುವುದನ್ನು ತಪ್ಪಿಸಿಕೊಂಡರು.

ಸದಾಕಾಲ ದೇವ ವಿರೋಧವನ್ನು ದೇವಸ್ಥಾನಗಳನ್ನು, ಸಾಧುಸಂತರನ್ನು ಲೇವಡಿ ಮಾಡುತ್ತಾ ಇರುವವರಿಗೆ ಧರ್ಮವನ್ನೇ ಕೈಗೆತ್ತಿಕೊಂಡರೆ ಹೇಗೆ ಎನ್ನುವ ಹೊಸ ಹುಳವೊಂದು ತಲೆ ಹೊಕ್ಕಿತು. ಅದಕ್ಕೆ ಸರಿಯಾಗಿ ಹಣಕ್ಕಾಗಿ ದೇಣಿಗೆಗಾಗಿ ಪ್ರಶಸ್ತಿಗಾಗಿ ಪರಾಕು ಹೇಳುವ ಕಾಷಾಯಧಾರಿಗಳು ಕೆಲವರು ಜೊತೆ ಸೇರಿದರು. ಇನ್ನು ನಾಯಕನೆನಿಸುವವನ ಸುತ್ತಸುತ್ತುವ ಅನುನಾಯಿಗಳಂತೂ ಇದ್ದೇ ಇರುವರು. ಇವರೆಲ್ಲರೂ ಸೇರಿ ಹೊಸ ಧರ್ಮವೊಂದರ ಸ್ಥಾಪನೆಗೆ ಹೊರಟರು. ದೇಶದಲ್ಲಿ ದೇಶದ ಜನರಲ್ಲಿ ಹಾಸುಹೊಕ್ಕಾಗಿ ಸೇರಿದ ಧರ್ಮ ಭಾವನೆಯನ್ನು ಯತಿಗಳ ಕುರಿತಾಗಿರುವ ಪೂಜ್ಯಭಾವನೆಯನ್ನು ಅರಿಯದೆ ಕೈಹಾಕಿದುದು ಈ ಅಧರ್ಮಿಗಳ ಪಾಲಿಗೆ ಅದು ಕಣಜದ ಗೂಡಾಗಿ ಪರಿಣಮಿಸಿತು. ತಮ್ಮನ್ನು ಸಮರ್ಥಿಸುವ ಭರದಲ್ಲಿ ಮಹಾಸ್ವಾಮಿಗಳನ್ನು ಸುಳ್ಳುಗಾರರನ್ನಾಗಿಸಲೂ ಈ ಜನ ಹಿಂಜರಿಯಲಿಲ್ಲ. ಆದರೆ ಕಟ್ಟಬೇಕೆಂದಿರುವ ಕಟ್ಟಡವೇ ಕುಸಿದುಬಿದ್ದಿತು. ಅದೂ ತಮ್ಮ ತಲೆಯ ಮೇಲೆಯೇ. ತನ್ನ ಪಾಪಕೃತ್ಯದ ಫಲವನ್ನು ತನ್ನೊಂದಿಗೆ ತನ್ನ ಮಡದಿ ಮಕ್ಕಳೂ ಹೊರುವರೆಂದುಕೊಂಡ ದರೋಡೆಕಾರನಂತೆ ನಡೆದುಕೊಂಡ ರಾಜಕಾರಣಿಯು ಕೊನೆಗೂ ಒಬ್ಬಂಟಿಗನಾಗಿ ಹಲುಬಬೇಕಾಯಿತು.

ರಾಷ್ಟ್ರೀಯ ಸ್ವಯಂಸೇವಕ ಸಂಘವು ತನ್ನ ಒಂಭತ್ತು ದಶಕಗಳ ಕಾಲಾವಧಿಯಲ್ಲಿ ಕಾಣುತ್ತಾ ಬಂದುದು ಇಂತಹ ನೂರಾರು ಪ್ರಸಂಗಗಳನ್ನು ತನ್ನ ದಾರಿಯನ್ನು ತಾನೇ ನಿರ್ಮಿಸಿಕೊಂಡು ಮುಂದುವರಿಯುವ ಆನೆಯ ಗಾಂಭೀರ್ಯ ಸಂಘದ್ದು. ಹಾದಿ ಬೀದಿಗಳಲ್ಲಿ ಬೊಗಳಿದವರುಂಟು, ಬೈದವರುಂಟು, ವಿರೋಧಿಸಿದವರುಂಟು. ಇವೆಲ್ಲವನ್ನೂ ಲೆಕ್ಕಕ್ಕಿಲ್ಲ ಎಂದುಕೊಂಡೇ ಸಂಘವು ನಡೆಯುತ್ತಿದೆ. ಅಂತಿಮ ಸತ್ಯವು ತನ್ನೊಂದಿಗಿದೆ ಎನ್ನುವ ಆತ್ಮವಿಶ್ವಾಸವೇ ಎಲ್ಲವನ್ನೂ ಗೆದ್ದು ಬಂದಿದೆ. ಭಾರತದ ಯಾವ ಮೂಲೆಯಲ್ಲೂ ಭಗವಾಧ್ವಜವನ್ನು ಹಾರಲು ಬಿಡಲಾರೆ ಎಂದು ಹರಿಹಾಯ್ದ ನೆಹರೂ ಕೂಡಾ ತಮ್ಮ ಅಂತಿಮ

ಕಾಲದಲ್ಲಿ ಸೋಲನ್ನು ಒಪ್ಪಿಕೊಂಡರು. 1962ರ ಗಣರಾಜ್ಯೋತ್ಸವದ ಪೆರೇಡಿನಲ್ಲಿ ಸಂಘದ ತುಕಡಿಯನ್ನು ಅದರ ಘೋಷವಾದ್ಯದ ತಂಡದೊಡನೆ ಭಾಗವಹಿಸಲು ಆಹ್ವಾನಿಸಿದರು. ತಮ್ಮ ಜೀವನದುದ್ದಕ್ಕೂ ಸಂಘವನ್ನು ವಿರೋಧಿಸುವುದನ್ನೇ ಜೀವನ ಧ್ಯೇಯವನ್ನಾಗಿಸಿದ ಜಯಪ್ರಕಾಶ ನಾರಾಯಣರು ತಮ್ಮ ಕೊನೆಗಾಲದಲ್ಲಿ "ಸಂಘದ ಸ್ವಯಂ ಸೇವಕರನ್ನು ಫ್ಯಾಸಿಸ್ಟ್ ಎಂದು ಕರೆಯುವುದಾದರೆ ನಾನೂ ಕೂಡಾ ಫಾಸಿಸ್ಟ್" ಎಂದು ಘೋಷಿಸಿಕೊಂಡರು.

ಆ ಮಟ್ಟದ ನಾಯಕರೇ ಸತ್ಯವನ್ನು ಅರಿತುಕೊಳ್ಳುವರೆಂದು ನಂಬಿಕೊಂಡು ಬಂದು ಅದನ್ನು ಆಗಗೊಡಿಸಿದ ಸಂಘದ ಧ್ಯೇಯಪಥದಲ್ಲಿ ಇನ್ನು 'ಹುಲು ಮಾನವರೇನು' ಅಡ್ಡ ಬರಬಲ್ಲರು!

## ಜೀವ ಉಳಿಸಲು ರಕ್ತದಾನ ಮಾಡಿ

**ಚಿತ್ತಾಪುರ :** ವ್ಯಕ್ತಿಯು ಸಾವು ಬದುಕಿನ ಮಧ್ಯೆ ಹೋರಾಟ ನಡೆಸುವಾಗ ಅವನ ಜೀವ ಉಳಿಸಲು ಆರೋಗ್ಯವಂತರು ಪ್ರತಿ ಮೂರು ತಿಂಗಳಿಗೊಮ್ಮೆ ರಕ್ತದಾನ ಮಾಡಬೇಕು ಎಂದು ಬಸವೇಶ್ವರ ಆಸ್ಪತ್ರೆ ವೈದ್ಯಾಧಿಕಾರಿ ಮೋನಾಲಿಸಾ ಹೇಳಿದರು.

ಪಟ್ಟಣದ ಅಕ್ಕಮಹಾದೇವಿ ಮಂದಿರದಲ್ಲಿ ಪುರಾಣ ಸಮಿತಿ ಹಾಗೂ ವಿಶ್ವ ಹಿಂದು ಪರಿಷತ್ ವತಿಯಿಂದ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಅಖಿಲ ಭಾರತ ವೀರಶೈವ ಮಹಾಸಭಾದ ತಾಲ್ಲೂಕು ಅಧ್ಯಕ್ಷ ಶಿವರಾಮ ಪಾಟೀಲ ಬೆಳಗುಂಪಾ ಉದ್ಘಾಟಿಸಿದರು.

ತಾಲ್ಲೂಕು ಯುವ ಘಟಕ ಅಧ್ಯಕ್ಷ ನಾಗರಾಜ ಭಂಕಲಗಿ, ವಿಶ್ವ ಹಿಂದು ಪರಿಷತ್ ವಿಭಾಗ ಕಾರ್ಯದರ್ಶಿ ಶಿವಕುಮಾರ ಬೋಳಶೆಟ್ಟಿ ತಾಲೂಕು ಕಾರ್ಯದರ್ಶಿ ಅಂಬ್ರೀಶ ಸುಲೆಗಾಂವ ಮಾತನಾಡಿದರು.

80 ಜನರು ಸ್ವಯಂ ಪ್ರೇರಿತವಾಗಿ ಬಂದು ರಕ್ತದಾನ ಮಾಡಿದರು.

ಜಿಲ್ಲಾ ಉಪಾಧ್ಯಕ್ಷ ಸತ್ಯನಾರಾಯಣ ಯಾದವ, ವಿಶ್ವ ಹಿಂದು ಪರಿಷತ್ ತಾಲ್ಲೂಕು ಅಧ್ಯಕ್ಷ ಅಶ್ವಥ ರಾಠೋಡ, ಪುರಾಣ ಸಮಿತಿ ಅಧ್ಯಕ್ಷ ಆನಂದ ಪಾಟೀಲ ನರಬೋಳಿ, ಅನಲ ವಡ್ಡಡಗಿ, ನಾಗರಾಜ ಹೂಗಾರ, ಕಾಶಿನಾಥ ಸಂಗಾವಿ, ಸಾಬಣ್ಣ ಪೂಜಾರಿ, ಕೊಟ್ರೇಶ ರೇಷ್ಮಿ, ವೆಂಕಟಮ್ಮ ಪಾಲಪ, ಪ್ರೀತಿ ಕಾನಕುರ್ತಿ, ಚಂದ್ರಶೇಖರ ಬಳ್ಳಾ, ಬಾಲಾಜಿ ಬುರಬುರೆ, ಮಹೇಶ ಬಟಗೇರಿ, ಸುರೇಂದ್ರ ವಿಶ್ವಕರ್ಮ ಇದ್ದರು.

ಶಾಮು, ಮೇದಾ ಸ್ವಾಗತಿಸಿದರು. ಸಂತೋಷ ಹಾವೇರಿ ನಿರೂಪಿಸಿದರು.

**(ಭಾವಚಿತ್ರ ರಕ್ಷಾ ಪುಟ 3)**




ಪ್ರಾಚೀನ ಕನ್ನಡಕಾವ್ಯ ಪರಿಚಯ

ಲಕ್ಷ್ಮೀಶ ಮಹಾಕವಿಯ

# ಜೈಮಿನಿ ಭಾರತದಲ್ಲಿ ಅಶ್ವಮೇಧಯಾಗ

– ಹ.ಸು.ಸುಬ್ಬರಾವ್, ಬೈಯಪ್ಪನಹಳ್ಳಿ, ಮೊಬೈಲ್ 9632771120

**ಹರಿಯಂತೆ ಬಲಯುತಂ ಶಿವನಂತೆ ರಾಜಶೇ ।**
**ಖರನಬ್ಜಭವನಂತೆ ಚತುರಾನನಂ ಸರಿ ।**
**ದ್ವರನಂತೆ ರತ್ನಾಕರಂ ದಿವಾಕರನಂತೆ ನಿರ್ದೋಷನಿಂದ್ರನಂತೆ ॥**
**ಪರಿಚಿತ ಸುರಭಿ ರಮ್ಯನಮೃತಾರ್ಚಿಯಂತೆ ವಿ।**
**ಸ್ತರಿತ ಕುವಲಯನೆಂದು ಧರ್ಮಜನ ಧರೆ ಪೊಗಳು ।**
**ತಿರೆ ಬಳಿಕ ಹಸ್ತಿನಾವತಿಗೆ ವೇದವ್ಯಾಸಮುನಿ ಯೊಂದಿನಂ ಬಂದನು ॥**

ವಿಷ್ಣುವಿನಂತೆ ಶಕ್ತಿಶಾಲಿಯೂ, ಶಿವನಂತೆ ಎಲ್ಲಾ ರಾಜರಿಗೂ ರಾಜನಂತೆಯೂ, ಕಮಲದಲ್ಲಿ ಜನಿಸಿದ ನಾಲ್ಕು ಮುಖದ ಬ್ರಹ್ಮನಂತೆ ಕಂಗೊಳಿಸುತ್ತಾ,ಅನೇಕ ನದಿಗಳು ಸೇರಿ ಉಂಟಾಗುವ ಸಮುದ್ರದಂತೆಯೂ, ಸೂರ್ಯನಂತೆ ನಿರ್ದೋಷಿಯೂ, ಇಂದ್ರನಂತೆ ಸದಾ ಕಾಮಧೇನುವಿನಂತೆಯೂ, ಎಲ್ಲರಿಗೂ ಅಮೃತಸಮಾನನಾಗಿದ್ದು, ವಿಸ್ತಾರವಾದ ಕಮಲದ ಪುಷ್ಪಗಳಂತೆ ರಾರಾಜಿಸುತ್ತಿರುವನೆಂದು ಧರ್ಮರಾಯನನ್ನು ಭೂಲೋಕವೇ ಹೊಗಳುತ್ತಿದ್ದಿತು ಹೀಗಿರಲು ಒಂದು ದಿನ ಹಸ್ತಿನಾವತಿಗೆ ವೇದವ್ಯಾಸ ಮುನಿಯು ಬಂದನು.

**ಬರಲಾ ನೃಪಾಲಕಂ ಸೋದರರ್ವೆರಸಿ ಮುನಿ ।**
**ವರನ ಪದಕೆರಗಿದೊಡೆ ಮಣಿದೆತ್ತಿ ಬೋಳೈಸಿ ।**
**ಪರಸಿ ಮಂತ್ರಾಕ್ಷತೆಯನಿತ್ತು ಸತ್ಕಾರಮಂ ಕೊಂಡು ಕುಳ್ಳಿರ್ದ ಬಳಿಕ ॥**
**ಅರಸನನುತಾಪದಿಂ ತಲೆವಾಗಿ ಮಾತಾಡ ।**
**ದಿರುತಿರ್ದನನಿಲ ಸಂಚಾರಮೊಂದಿನಿತಿಲ್ಲ ।**
**ದುರಿವ ಕಡುಬೇಸಗೆಯ ಬಿಸಿಲಿಂದ ಬಸವಳಿದ ಕೋಮಲ ರಸಾಲದಂತೆ ॥**

ಹೀಗೆ ಪೂಜ್ಯರಾದ ವೇದವ್ಯಾಸ ಮುನೀಂದ್ರರು ಬರಲು, ಧರ್ಮರಾಯನು ತನ್ನ ತಮ್ಮಂದಿರೊಡಗೂಡಿ ಮುನಿವರನ ಪದ ಕಮಲಗಳಿಗೆ ನಮಸ್ಕರಿಸಲು, ವೇದವ್ಯಾಸರು ಬಗ್ಗಿ ಎರಡೂ ಕೈಗಳಿಂದ ಅವನನ್ನು ಹಿಡಿದು ಮೇಲೆತ್ತಿ, ತಲೆಸವರಿ ಮಂತ್ರಾಕ್ಷತೆಯನ್ನು ಹಾಕಿ ಅವನಿತ್ತ ಸತ್ಕಾರವನ್ನು ಸ್ವೀಕರಿಸಿ, ಉಚಿತಾಸನದಲ್ಲಿ ಕುಳಿತರು. ಆಗ ಧರ್ಮರಾಯನು ತಲೆಯನ್ನು ಮೇಲೆತ್ತದೆ ಬಹಳವಾದ ದುಃಖ ದುಮ್ಮಾನಗಳಿಂದ ಕೂಡಿ ಮಾತಾಡದೆ

ಮೌನವಾಗಿದ್ದನು. ಮುನಿಗೆ ಆಶ್ಚರ್ಯವಾಯಿತು.ಸ್ವಲ್ಪವೂ ಗಾಳಿ ಬೀಸದೆ ಬೇಸಗೆಯ ಬಿಸಿಲಿನ ಕಡು ತಾಪಕ್ಕೆ ಬೆಂದು ಬಸವಳಿದು ಬಾಡಿದ ಮೃದುವಾದ ಕಬ್ಬಿನಂತೆ ತಲೆ ತಗ್ಗಿಸಿ ಕುಳಿತಿದ್ದ ಧರ್ಮರಾಯನನ್ನು ಕಂಡು ಅವನ ಮ,ನೋಭಾವವನ್ನು ತಿಳಿದುಕೊಂಡರು.

**ಕಂಡನರಸನ ಭಾವಮಂ ಬಳಿಕ ನಗುತ ಬೆಸ ।**
**ಗೊಂಡನಿಂತೆಂದಾ ಮುನೀಂದ್ರನೆಲೆ ನೃಪತಿ ಭೂ ।**
**ಮಂಡಲದ ಸಕಲ ಸಾಮ್ರಾಜ್ಯಮಂ ಪಾಲಿಸುವ ನಿನ್ನ ಸಂತಸದೇಳ್ಗೆಗೆ ॥**
**ಖಂಡನವ ಮಾಳ್ಪುದಾನನದಿರವು ಸಾಕು ಮನ ।**
**ದಂಡಲೆಯ ನೊರೆಯೆನಲ್ ಜೀಯ ಸಂತಾಪದಿಂ ।**

ಬೆಂಡಾದುದೆನ್ನೊಡಲ್ ಸೈರಿಸಲರಿಯೆ ನೆಂದೊಡಾ ತಪೋನಿಧಿ ನುಡಿದನು ॥ ಆಗ ವೇದವ್ಯಾಸರು ನಸುನಗುತ್ತಾ ಹೀಗೆ ಹೇಳಿದರು “” ಎಲೈ ಧರ್ಮರಾಯನೆ, ಭೂಮಂಡಲದ ಸಕಲ ಸಾಮ್ರಾಜ್ಯವೂ ನಿನ್ನ ಅಧೀನವಾಗಿದೆ. ಇಂತಹ ವಿಶಾಲವಾದ ಸಾಮ್ರಾಜ್ಯವನ್ನು ಪಾಲಿಸುತ್ತಿರುವ ನಿನಗೆ ಅತ್ಯಂತ ಹರ್ಷವಾಗಬೇಕು. ಅದರ ಬದಲು ನಿನಗೆ ಚಿಂತೆಯನ್ನು ತರುವ , ನಿನ್ನ ಸಂತೋಷಕ್ಕೆ ಅಡ್ಡಿ ಮಾಡುವ ನಿನ್ನ ಮುಖವನ್ನು ಮಂಕಾಗಿಸುವ ಈ ಭಾವನೆಯನ್ನು ತೊಲಗಿಸು. ನಾನಾ ವಿಚಾರಗಳಲ್ಲಿ ವೃಥಾ ಅಲೆಯುತ್ತಿರುವ ನಿನ್ನ ಮನಸ್ಸನ್ನು ಹಿಡಿತದಲ್ಲಿಟ್ಟುಕೋ. ?ಎಂದು ಹೇಳಲು ಧಮರಾಯನು , ಪೂಜ್ಯರೇ, ನನ್ನ ಮನಸ್ಸು ತೀವ್ರ ದುಃಖ ಚಿಂತೆಗಳಿಂದ ಬೆಂದು ಬೆಂಡಾಗಿರುವುದು,ಅದನ್ನು ಸಹಿಸಲು ಆಗುತ್ತಿಲ್ಲವೆಂದು ಧರ್ಮರಾಯನು ಹೇಳಲು ತಪೋನಿಧಿಯಾದ ವ್ಯಾಸರು ಹೀಗೆ ಹೇಳಿದರು.

**ಕೆತ್ತ ಬಲ್ಗತ್ತಲೆಗೆ ತರಣಿ ಮುಂಗಾಣದಿರೆ ।**
**ಪೊತ್ತುವೆಳಗಂ ಬೇರೆ ತೋರ್ಪರಾರ್ ಬಿಡದೆ ಘ ।**
**ರ್ಮೋತ್ತರಕೆ ಮಾರುತಂ ಬೆಮರ್ದೊಡಾರ್ ಬೀಸುವರ್ ಬಳಿಕಾಲವಟ್ಟದಿಂದ ॥**
**ಕೃತ್ರಿಮದ ವಿಷ ದ ಸೋಂಕಿಗೆ ಗರುಡನಳವಳಿಯೆ ।**
**ಮತ್ತೆ ರಕ್ಷೆಗೆ ಮಂತ್ರಿಸುವರಾರು ಭೂಪ ನೀ ।**
**ನೊತ್ತುವನುತಾಪಕೆಡೆಗೊಟ್ಟೊಡಾರ್ ಬಿಡಿಸುವರ್ ಪೇಳೆಂದನಾ ಮುನಿಪನು ॥**

ವೇದವ್ಯಾಸರು ಹೇಳುತ್ತಾರೆ “ ಎಲೈ ರಾಜೇಂದ್ರನೆ, ಭಯಂಕರವಾದ ಕತ್ತಲೆಗೆ ಸೂರ್ಯನೇ ಹೆದರಿಕೊಂಡರೆ ಅವನಿಗೆ ಬೆಳಕು ತೋರಿಸುವವರು ಯಾರಿದ್ದಾರು? ಅತಿಯಾದ ಸುಡುವ ಬಿಸಿಲಿಗೆ ಗಾಳಿಯೇ ಬೆವರಿದರೆ ಅದಕ್ಕೆ ಯಾರು ತಾನೇ ಗಾಳಿಯನ್ನು ಬೀಸುವರು? ಹಾವು ಕಡಿದ ವಿಷಕ್ಕೆ ಗರುಡನೇ ಹೆದರಿಕೊಂಡರೆ ಆ ವಿಷಹಾರಿಯಾದ ಮಂತ್ರವನ್ನು ಯಾರು ಹೇಳಲು ಸಾಧ್ಯ?ಹಾಗೆ ಎಲ್ಲರ ದುಃಖ ಸಂತಾಪಗಳನ್ನು ನೀಗಿಸುವ ಅತೀವ ಸಾಮರ್ಥ್ಯವುಳ್ಳ ನೀನೇ ಹೀಗೆ ಮಂಕಾದರೆ ಯಾರು ತಾನೇ ನಿನಗೆ ಸಮಾಧಾನ ಹೇಳಿಯಾರು ? ಚಿಂತೆಯನ್ನು ಬಿಡು” ಎನ್ನಲು,

**ಎನಲಾ ಮುನೀಂದ್ರನಂ ನೋಡಿ ಬಿಸುಸುಯ್ಯುತೊ ।**
**ಯ್ಯನೆ ಮಹೀಪಾಲನಿಂತೆಂದನೆಂತೆನ್ನ ಮ ।**
**ನದನುತಾಪಮಂ ಬಿಡುವೆನಕಟ ಶಿಶುತನದಿಂದ ಸಲಹಿದ ಪಿತಾಮಹಂಗೆ ॥**
**ನೆನೆದೆವನುಚಿತವ ನಗ್ರಜನೆಂದರಿಯದೆ ಕ ।**
**ರ್ಣ ನನಿರಿದೆವಾಚಾರ್ಯವಧೆಗೆಳಸಿದೆವು ಸುಯೋ ।**
**ಧನ ಶಲ್ಯ ಮುಖ್ಯ ಬಾಂಧವರನೀಡಾಡಿದೆವು ಬದುಕಲೇಕಿನ್ನಿಳೆಯೊಳು ॥**

ವ್ಯಾಸರು ಈ ರೀತಿಯಾಗಿ ಹೇಳಲು, ಧರ್ಮರಾಯನು ನಿಟ್ಟುಸಿರು ಬಿಡುತ್ತಾ ನಿಧಾನವಾಗಿ ತಲೆಯೆತ್ತಿ ವ್ಯಾಸರನ್ನು ನೋಡುತ್ತಾ ,ತನ್ನ ಮನಸ್ಸಿನಲ್ಲಾಗುತ್ತಿದ್ದ ತಳಮಳವನ್ನು ತೋಡಿಕೊಂಡನು." ಪೂಜ್ಯರೇ, ನನ್ನ ಮನಸ್ಸಿನ ತೊಳಲಾಟವನ್ನು ಹೇಗೆ ನೀಗುವೆನೋ ತಿಳಿಯದು, ಮಗುವಿದ್ದಾಗಿನಿಂದ ನಮ್ಮನ್ನು ಸಾಕಿ, ಸಲಹಿ, ಬೆಳೆಸಿದ ಪಿತಾಮಹರಾಧ ಭೀಷ್ಮರಿಗೆ ಅನ್ಯಾಯ ಮಾಡಿದೆವು, ಕರ್ಣನು ನಮ್ಮ ಅಣ್ಣನೆಂದು ತಿಳಿಯದೆ ಮೋಸದಿಂದ ಕೊಂದೆವು, ಗುರುಗಳಾಗಿ ನಮಗೆ ಸಕಲ ಶಿಕ್ಷಣವನ್ನೂ ಕಲಿಸಿಕೊಟ್ಟ ದ್ರೋಣಾಚಾರ್ಯರನ್ನು ಕೊಲ್ಲಲು ಮುಂದಾದೆವು, ದುರ್ಯೋಧನ, ಶಲ್ಯ ಮುಂತಾದವರೆಲ್ಲ ನಮ್ಮ ಬಂಧು ಬಾಂಧವರು, ಅವರೊಡನೆ ಹೋರಾಡಿ ಕೊಂದೆವು, ಇಷ್ಟೆಲ್ಲಾ ಅನ್ಯಾಯಗಳನ್ನು ಮಾಡಿ ಈಗ ಭೂಮಿಯಲ್ಲಿ ನಾವು ಏಕೆ ಬದುಕಿರಬೇಕು? ಇದೇ ನನ್ನ ಮನಸ್ಸನ್ನು ಕೊರೆಯುತ್ತಿರುವ ದುಃಖ, –ಎಂದನು.

**ಆಗಳರಸನ ಮಾತಿನಾಸರಂ ಕೇಳ್ದು ತಲೆ ।**
**ದೂಗಿ ಮುನಿಪುಂಗವಂ ನುಡಿದನೆಲೆ ಭೂಪ ನಿಗ ।**
**ಮಾಗಮ ಪುರಾಣ ಶಾಸ್ತ್ರಂಗಳ ವಿಚಾರಮಂ ನೀನರಿಯದಪ್ರೌಢನೆ ।**
**ಈಗಳನುತಾಪಮೇತಕೆ ನಿಖಿಳ ಸಾಮ್ರಾಜ್ಯ ।**
**ಮಾಗಲಿಳೆ ಯಂ ಧರ್ಮದಿಂ ಪಾಲಿಸದೆ ಬನಕೆ ।**
**ಪೋಗಲಾವುದು ಸಿದ್ಧಿ ನಿನಮಗಪ್ಪುದುಸುರೆನೆ ಧರಾನಾಥನಿಂತೆಂದನು ॥**

ಹೀಗೆ ಧರ್ಮರಾಯನು ವ್ಯಾಕುಲದಿಂದ ಹೇಳಲು ವೇದವ್ಯಾಸರು ತಲೆದೂಗುತ್ತ ಸಮಾಧಾನ ಮಾಡುತ್ತಾರೆ ಎಲೇ ಭೂಪತಿಯೆ, ನಿನ್ನ ಮಾತಿನಲ್ಲಿರುವ ಬೇಸರವು ತಿಳಿಯಿತು. ನೀನು ವೇದ ಶಾಸ್ತ್ರ ಪುರಾಣ ಎಲ್ಲವನ್ನೂ ಆಳವಾಗಿ ಗ್ರಹಿಸಿರುವವನು. ಎಲ್ಲಾ ವಿಚಾರಗಳನ್ನು ಅರಿಯದ ಅಜ್ಞಾನಿಯಂತೆ ಈಗ ಏಕೆ ಚಿಂತೆ ಮಾಡುತ್ತಿರುವೆ?ವಿಶಾಲವಾದ ಈ ಭೂಮಂಡಲವೆಲ್ಲವೂ ನಿನ್ನದಾಗಿರುವುದು, ಇದನ್ನು ಧರ್ಮದಿಂದಲೂ, ನ್ಯಾಯದಿಂದಲೂ ಪಾಲಿಸಿದರೆ ನಿನಗೆ ಪುಣ್ಯವುಂಟು, ಅದನ್ನು ಬಿಟ್ಟು ಕಾಡಿಗೆ ಹೋಗಿ ತಪಸ್ಸು ಮಾಡಿದರೆ ನಿನಗೆ ಯಾವ ಸಿದ್ಧಿಯೂ ದೊರಕದು, ಸುಮ್ಮನೆ ವ್ಯರ್ಥವಾಗಿ ಬಾಳು ಸಾಗಿಸುವುದರಿಂದ ಏನುತಾನೇ ಸಿದ್ಧಿಸುವುದು? ಎಂದು ಹೇಳಿದರು.

**– ಮುಂದುವರಿಯುವುದು –**

# ‘ನನ್ನ ಮಗಳು ನನಗೆ ಬೇಕು
## (ಒಬ್ಬ ತಾಯಿಯ ಅಳಲನ್ನು ಕೇಳುವಿರಾ...)



ಆಕೆ ಕೇರಳದ ರಾಜಧಾನಿ ತಿರುವನಂತಪುರದ ಬಳಿಯ ಅಟ್ಟಂಗಳದಲ್ಲಿ ವಾಸಿಸುವ ಗೃಹಿಣಿ. ಹೆಸರು ಬಿಂದು ಸಂಬತ್. ಆಕೆಗೆ ಇಬ್ಬರು ಮಕ್ಕಳು. ಹಿರಿಮಗ ರಾಷ್ಟ್ರೀಯ ಸುರಕ್ಷಾದಳ – ಎನ್. ಎಸ್.ಜಿ.ಯಲ್ಲಿ ಕ್ಯಾಪ್ಟನ್ ಆಗಿದ್ದಾನೆ. ಎರಡನೆಯ ವಳು, ಮಗಳು ನಿಮಿಷಾ. ಬಿ.ಡಿ.ಎಸ್. ಪದವಿಗಾಗಿ ಓದುತ್ತಿದ್ದವಳು. ಈ ಲೇಖನದ ಮುಖ್ಯ ಪಾತ್ರವೇ ಅವಳು. ಆಕೆಯನ್ನು ತನಗೆ ಮರಳಿಸುವಂತೆ ತಾಯಿ ಬಿಂದು ಅಧಿಕಾರಿಗಳನ್ನು, ರಾಜಕಾರಣಿಗಳನ್ನು, ನ್ಯಾಯಾಲಯಗಳನ್ನು ಅಂಗಲಾಚುತ್ತಿರುವಳು.

ನಿಮಿಷಾಳನ್ನು ಉಗ್ರವಾದಿ ಸಂಘಟನೆಯಾದ ಐ.ಎಸ್.ಐ.ಎಸ್. ಅಪಹರಿಸಿತ್ತು. ಈಚೆಗೆ ಕ್ರೈಸ್ತಮತ ದಿಂದ ಮತಾಂತರಗೊಂಡು, ತನ್ನ ಇಸಾ ಎನ್ನುವ ಹೆಸರನ್ನು ಬೆಕ್ಸನ್ ಎಂದು ಬದಲಾಯಿಸಿಕೊಂಡ ಐ.ಎಸ್.ಐ.ಎಸ್. ಉಗ್ರವಾದಿ ತರುಣನು ಆಕೆಯನ್ನು ವಿವಾಹವಾಗಿದ್ದೇನೆ ಎಂದು ಹೇಳಿಕೊಳ್ಳುತ್ತಿದ್ದಾನೆ. ಕಳೆದ ವರ್ಷ ನಿಮಿಷಾ ಆತನೊಂದಿಗೆ ಅಫಗಾನಿಸ್ತಾನಕ್ಕೂ ಭೇಟಿ ನೀಡಿದ್ದಳು.

ತನ್ನ ಮಗಳನ್ನು ಹಿಂಪಡೆಯಲು ಬಿಂದು ಮಾಡದ ಪ್ರಯತ್ನವಿಲ್ಲ. ಭೇಟಿಯಾಗದ ಗಣ್ಯವ್ಯಕ್ತಿಗಳಿಲ್ಲ. ಸಾಮಾನ್ಯ ಗೃಹಿಣಿಯರಲ್ಲಿ ಒಬ್ಬಳಾದ ಬಿಂದು ಈಗ ಪಶ್ಚಾತ್ತಾಪ ಪಡುತ್ತಿರುವರು. ಜಿಹಾದ್‌ನ ಬಲೆಗೆ ಬಿದ್ದ ಮಗಳ ಬಗ್ಗೆ ಅರ್ಥಮಾಡಿಕೊಳ್ಳುವಲ್ಲಿ ತಾನು ಎಡವಿದೆ ಎಂದೂ ಆಕೆ ಈಗ ಒಪ್ಪುತ್ತಿದ್ದಾರೆ. ಹೀಗೆ ತಮ್ಮ ಮುದ್ದು ಮಕ್ಕಳನ್ನು ಮುಸ್ಲಿಂ ಜೆಹಾದಿಗಳು ಕರೆದೊಯ್ದಾಗ ಪಡುವ ಪಾಡನ್ನು ಬಿಂದು ಅನುಭವಿಸುತ್ತಿದ್ದರೂ, ಉಳಿದ ಇಂತಹ ತಾಯಂದಿರು ಮೌನವಾಗಿ ತಮ್ಮ ಹಣೆಬರಹವನ್ನು ಶಪಿಸುತ್ತಿದ್ದರೆ ಬಿಂದುರವರು ಮಾತ್ರ ತನ್ನ ಮಗಳನ್ನು ಪಡೆಯಲು ಆಕಾಶಭೂಮಿಗಳನ್ನು ಒಂದು ಮಾಡುತ್ತಿದ್ದಾರೆ.

ಬಿಂದು ತಮ್ಮ ನೋವನ್ನು ಕಣ್ಣೀರಿಡುತ್ತಾ ವಿವರಿಸುತ್ತಾರೆ "ಮೊದಲು ಕ್ರೈಸ್ತನಾಗಿದ್ದ ಇಸಾ ಮುಸ್ಲಿಮನಾಗಿ ಬೆಕ್ಸನ್ ಎಂದು ಹೆಸರಿಟ್ಟುಕೊಳ್ಳುತ್ತಾನೆ. ಅವನೊಂದಿಗೆ ನನ್ನ ಮಗಳು ನಿಮಿಷಾ ಅಫಘಾನಿಸ್ತಾನಕ್ಕೂ ಹೋದಳು. ಇದಕ್ಕೂ ಮೊದಲು ನನ್ನ ಮಗಳ ದಾರಿತಪ್ಪಿಸಿದವನು ಸಜ್ಜದ್ ರಹಮಾನ್ ಎನ್ನುವ ಮುಸ್ಲಿಮ್ ತರುಣ. ಅವನು ವೈದ್ಯಕಾಲೇಜು ಪ್ರವೇಶಕ್ಕಾಗಿ ನಡೆಯುವ ತರಗತಿಗಳಲ್ಲಿ ನನ್ನ ಮಗಳ ಸಹಪಾಠಿಯಾಗಿದ್ದನು. ಆಗಲೇ ಅವನು ನಿಮಿಷಾಳ

ಹಿಂದೆ ಬಿದ್ದಿದ್ದನ್ನು ನಿಮಿಷಾ ನನ್ನ ಮಗನಿಗೆ ಹೇಳಿದ್ದಳು. ಸಜ್ಜದ್ ಪಾಂಡಿಚೇರಿಯ ಮೆಡಿಕಲ್ ಕಾಲೇಜ್ ಸೇರಿದ್ದರೆ, ನಿಮಿಷಾ ಕಾಸರಗೋಡಿನ ಮುಸ್ಲಿಂ ಆಡಳಿತದ ಸೆಂಚುರಿ ಡೆಂಟಲ್ ಕಾಲೇಜಿಗೆ ಬಿ.ಡಿ.ಎಸ್. ಓದಲು ಸೇರಿದಳು. ಅವಳ ಸಹಪಾಠಿಗಳು ನನಗೆ ನಂತರ ತಿಳಿಸಿದಂತೆ ಮುಂದಿನ ಎರಡು ವರ್ಷ ಕಾಲ ನಿಮಿಷಾ ಮತ್ತು ಸಜ್ಜದ್‌ರ ಸಂಬಂಧ, ಭೇಟಿಗಳು ನಡೆಯುತ್ತಲೇ ಇದ್ದವು.

ಈ ನಡುವೆ ಸಜ್ಜದನ ತಾಯಿ ನಿಮಿಷಾಳನ್ನು ತಿರುವನಂತಪುರದಲ್ಲಿ ಭೇಟಿಯಾಗಿರುವುದು ತಿಳಿದು ಬಂತು. ಆ ತಾಯಿ ಮತ್ತು ಮಗ ಇಬ್ಬರೂ ಸೇರಿ ನನ್ನ ಮಗಳನ್ನು ತಿರುವನಂತಪುರದ ಇಸ್ಲಾಂ ತರಬೇತಿಯ ಸಲಾಫಿ ಕೇಂದ್ರಕ್ಕೆ ಕರೆದೊಯ್ದರು. ಇದೇ ಸಮಯ ನನ್ನ ನಿಮಿಷಾ ಗರ್ಭಿಣಿಯಾದಳು. ಸಜ್ಜದ್ ಅವಳನ್ನು ಮಂಗಳೂರಿಗೆ ಕರೆದೊಯ್ದು ಗರ್ಭಪಾತ ಮಾಡಿಸಿಕೊಳ್ಳಲು ಒಪ್ಪಿಸಿದನು. ಸಜ್ಜದನ ತಾಯಿ ಸಜ್ಜದನನ್ನು ಮದುವೆಯಾಗಬೇಕಾದರೆ ಮುಸ್ಲಿಮಳಾಗಲು ನಿಮಿಷಾಳನ್ನು ಒತ್ತಾಯಿಸಲು ಪ್ರಾರಂಭಿಸಿದಳು.

ಬಿಕ್ಕಳಿಸುವ ಬಿಂದು ತನ್ನ ಮಗಳ ಪಾಡನ್ನು ವಿವರಿಸಲು ಮತ್ತೆ ಪ್ರಾರಂಭಿಸಿದರು. ನನ್ನ ಮಗಳು ಓದಿನಲ್ಲಿ ಬಹಳ ಬುದ್ಧಿವಂತಳು. ಹೀಗೇಕೇ ಅವಳು ವರ್ತಿಸುತಿದ್ದಾಳೆಂದು ನನಗೆ ಅರ್ಥವೇ ಆಗುತ್ತಿಲ್ಲ. ಪತ್ರಕರ್ತರು ಕೇಳುತ್ತಿದ್ದಾಗಲೇ ನನ್ನ ಮಗಳ ಪರಿಸ್ಥಿತಿಯು ನನಗೆ ತಿಳಿದು ಬಂದುದು. ಸಜ್ಜದನಂತಹ ಮೋಸಗಾರನಲ್ಲವಾದರೆ ನಾನು ನನ್ನ ಮಗಳು ಮುಸ್ಲಿಮನನ್ನು ಮದುವೆಯಾಗುವುದನ್ನೂ ವಿರೋಧಿಸುತ್ತಿರಲಿಲ್ಲ.

ಈ ಸಜ್ಜದ್ ನನ್ನ ಮಗಳನ್ನಷ್ಟೇ ಅಲ್ಲ ಮತ್ತಿಬ್ಬರು ಹೆಣ್ಣುಮಕ್ಕಳ ಬಾಳನ್ನು ಹಾಳು ಮಾಡಿದ್ದಾನೆ. ಅವರಲ್ಲಿ ಒಬ್ಬಾಕೆ ಕ್ರೈಸ್ತಳು. ಅವನೀಗ ವೈದ್ಯ. ಮತ್ತೆ ಇನ್ನೊಬ್ಬಾಕೆಯನ್ನೀಗ ಅವನು ಮದುವೆಯಾಗಿದ್ದಾನೆ. ಅವನು ನನ್ನನ್ನು ಯಾವಾಗಲೂ ಬೆದರಿಸುತ್ತಿದ್ದ. ಕೇರಳದಲ್ಲಿ ಅವನಿಗೆ ಅತಿಗಣ್ಯ ವ್ಯಕ್ತಿಗಳ ಸಂಪರ್ಕವಿದೆಯೆಂದು ನನ್ನನ್ನು ಹೆದರಿಸುವ ಪ್ರಯತ್ನ ಮಾಡುತ್ತಿದ್ದ.

ನಿಮಿಷಾ ತನ್ನ ಯಾವ ವಿಚಾರಗಳನ್ನು ನನಗೆ ಹೇಳಿರಲಿಲ್ಲ. ನಾವಂತೂ ಆಕೆ ತನ್ನ ಓದನ್ನು ಚೆನ್ನಾಗಿ ಮುಂದುವರಿಸುತ್ತಿದ್ದಾಳೆ ಎಂದುಕೊಂಡಿದ್ದೆವು. ಅವಳು ಓದುವ ಮುಸ್ಲಿಂ ಕಾಲೇಜಿನ ಕೆಲವು ಅಧ್ಯಾಪಕರೂ ಈ ಪ್ರಕರಣದಲ್ಲಿ ಶಾಮೀಲಾಗಿರುವರು ಎಂದು ನನಗೆ ಅನುಮಾನವಿದೆ. ಎಲ್ಲಾ ಅರ್ಧವಾರ್ಷಿಕ ಪರೀಕ್ಷೆಗಳಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ನನ್ನ ಮಗಳು ಕೊನೆಯ ಮೂರು ಅರ್ಧವಾರ್ಷಿಕ ಪರೀಕ್ಷೆಗಳನ್ನು ಬರೆಯಲೇ ಇಲ್ಲ. ತರಗತಿಗಳಿಗೆ ಹಾಜರಾಗಲೇ ಇಲ್ಲ.

ನನ್ನ ಮಗಳು ಅಂತಹ ದುರ್ಬಲ ಮನಸ್ಸಿನವಳೂ ಅಲ್ಲ. ಅವಳು ನಾಟಕಗಳಲ್ಲಿ ಅಭಿನಯಿಸುತ್ತಿದ್ದಳು. ಭರತನಾಟ್ಯವನ್ನೂ ಕಲಿಯುತ್ತಿದ್ದಳು. ಭಗವದ್ಗೀತೆಯ ಪಠಣ ಸ್ಪರ್ಧೆಯಲ್ಲಿ ರಾಜ್ಯಕ್ಕೆ ಮೊದಲ ಸ್ಥಾನಗಳಿಸಿದ್ದಳು. ನನಗಂತೂ ನನ್ನ ಮಗಳ ಮೇಲೆ ಪೂರ್ಣವಿಶ್ವಾಸವಿತ್ತು.

ಒಂದು ದಿನ, ಅದು ಕಳೆದವರ್ಷ ಆಗಸ್ಟ್ 1ನೇ ತಾರೀಖು ಇರಬೇಕು. ಬೆಳಂಬೆಳಗ್ಗೆ ನನಗೊಂದು ಕನಸು ಬಿದ್ದಿತು. ನನ್ನ ಮಗಳು ಬುರ್ಖಾ ತೊಟ್ಟಿದ್ದಳು. ನಾನು ಲಗುಬಗನೆ ಎದ್ದು ಬಿಟ್ಟೆ. ನಿಮಿಷಾಗೆ ಕರೆ ಮಾಡಿದೆ. ಅವಳ್ಯಾಕೋ ಮಾತಿನ ನಡುವೆಯೇ ಕರೆಯನ್ನು ಕೊನೆಗೊಳಿಸಿದಳು. ಆ ನಂತರ ನವೆಂಬರ್ ತಿಂಗಳಲ್ಲಿ ನನ್ನ ಮಗನೂ ಅವಳಿಗೆ ಕರೆ ಮಾಡಿದ್ದನು. ಆದರೆ ಅವಳು ಆ ಕರೆಯನ್ನು ಸ್ವೀಕರಿಸಲಿಲ್ಲ ಎಂದು ಅವನು ನನಗೆ ಹೇಳಿದ. ಆ ನಂತರ ನಾನು ಅವಳಿಗೆ ಹಲವು ಬಾರಿ ಕರೆ ಮಾಡಲು ಪ್ರಯತ್ನಿಸಿದಾಗ ನಡುವೆ ಒಮ್ಮೆ ಮಾತನಾಡಿದಳು. ನನ್ನನ್ನು ಮೆಚ್ಚಿಸಲೆಂಬಂತೆ ತಾನು ಕಾಲೇಜಿನಲ್ಲೇ ಇದ್ದೇನೆ ಎಂದಳು. ಬೇಕಾದರೆ ಫೋನನ್ನು ನನ್ನ ಸ್ನೇಹಿತೆಗೆ ಕೊಡುತ್ತೇನೆ. ನೀನೇ ಮಾತಾಡು ಎಂದಳು. ಒಂದು ಕ್ಷಣ ನನಗೆ ಏನೋ ಅನಿಸಿತು. ಮಗಳ ಸ್ನೇಹಿತೆಯನ್ನು ನಿನ್ನ ಫೋನ್ ನಂಬರ್ ಕೊಡು ಎಂದು ಕೇಳಿದೆ. ಆಕೆ ನಂಬರ್‌ನ್ನು ಕೊಟ್ಟಳು. ಅವಳ ಹೆಸರು ಮರಿಯಮ್ ಎಬಿನ್ ಜಾಕೊಬ್. ಅವಳ ಗಂಡ ಯಾಹ್ಯಾ, ಅವನು ಕೂಡಾ ಬೆಟ್ಸನ್ ಎಂಬ ಹೆಸರಿನಲ್ಲಿ ಕ್ರೈಸ್ತನಾಗಿದ್ದವನು ಈಗ ಮುಸ್ಲಿಮನಾಗಿ ಮತಾಂತರಗೊಂಡಿರುವನು. ಈತನೇ ಮುಂದೆ ನಿಮಿಷಾಳ ಮೈದುನನಾದವನು. ಅಂದರೆ ಇಸಾನಾಗಿದ್ದು ಬೆಕ್ಸನ್ ಎಂದು ಮುಸ್ಲಿಮನಾಗಿ ನಿಮಿಷಾಳನ್ನು ಮದುವೆ ಯಾದವನ ತಮ್ಮ.



ನಾನು ಮರುದಿನವೇ ಕೇರಳದ ಗೃಹಮಂತ್ರಿ ರಮೇಶ ಚೆನ್ನಿತಾಲರನ್ನು ಭೇಟಿಯಾದೆ. ಪೊಲೀಸ್ ದೂರನ್ನೂ ದಾಖಲಿಸಿದೆ. ಅದುವೆ ನನ್ನ ತಪ್ಪಾಗಿರಬಹುದೇ ಎಂದು ನಾನು ಈಗಲೂ ಯೋಚಿಸುತ್ತಿದ್ದೇನೆ. ಏಕೆಂದರೆ ಆ ಕೂಡಲೇ ನನ್ನ ಮಗಳು ನನ್ನನ್ನು ದೂರವಾಣಿಯಲ್ಲಿ ಮಾತನಾಡಿ ತಾನು ಮುಸ್ಲಿಮನೊಬ್ಬನನ್ನು ಮದುವೆಯಾಗಿರುವೆನೆಂದೂ ತಾನೂ ಮತಾಂತರಗೊಂಡಿದ್ದೇನೆಂದೂ ಹೇಳಿದಳು.

ಅವಳನ್ನು ನಾನೊಮ್ಮೆ ಪೊಲೀಸ್ ವಾಹನದಲ್ಲಿ ಹೋಗುತ್ತಿರುವುದನ್ನು ಕಂಡೆ. ಆಗ ಅವಳು ಬುರ್ಖಾ ಧರಿಸಿದ್ದಳು. ವಾಹನದ ಬಳಿ ಹೋದ ನಾನು ಅವಳಿಗೆ ಬುರ್ಖಾ ಬಿಚ್ಚಿಬಿಡು ಎಂದು ಹೇಳಿದೆ. ಆಕೆ ಆ ಕೂಡಲೇ ಬುರ್ಖಾ ತೆಗೆದುಬಿಟ್ಟಳು. ಆಗಿನವರೆಗೆ ಅವಳು ಸಜ್ಜದನ ಬಗ್ಗೆಯಾಗಲೀ ಅವನು ಅವಳನ್ನು ಮತಾಂತರಗೊಳಿಸಿದ ಬಗ್ಗೆಯಾಗಲೀ ಹೇಳಿರಲಿಲ್ಲ.

ನ್ಯಾಯಾಲಯದ ಆವರಣದಲ್ಲಿ ಒಂದು ದಿನ ನಾವಿದ್ದುದು ನೆನಪಾಗುತ್ತದೆ. ಮುಸ್ಲಿಮರ ಒಂದು ಗುಂಪು ಅಲ್ಲಿದ್ದಿತು. ಅವರಲ್ಲಿ ಮುಂದೆ ಐ.ಎಸ್.ಐ.ಎಸ್. ಸೇರಿ ಅಫಘಾನಿಸ್ತಾನದಲ್ಲಿ

ಉಗ್ರವಾದಿಯಾಗಿ ಅಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಸತ್ತುಹೋದ ಯಾಹ್ಯಾ (ಬೆಟ್ಸನ್–ನಿಮಿಷಾಳನ್ನು ಮದುವೆಯಾದ ಬೆಕ್ಸನ್‌ನ ತಮ್ಮ)ನೂ ಇದ್ದ. ಅವರೆಲ್ಲರೂ ಉದ್ದನೆಯ ಗಡ್ಡವನ್ನು ಬಿಟ್ಟಿದ್ದರು. ಅಲ್ಲಿದ್ದ ಪೊಲೀಸರೂ ಸೇರಿದ ನಾಗರಿಕರೂ ಅವರೆಲ್ಲರೂ ಮುಜಾಹಿದೀನ್‌ಗಳೆಂದೂ ತರುಣರನ್ನು ಉಗ್ರಗಾಮಿ ಪಡೆಗೆ ಭರ್ತಿಮಾಡುವವರೆಂದೂ ಮಾತನಾಡಿಕೊಳ್ಳುತ್ತಿದ್ದರು. ನಾನು ನ್ಯಾಯಾಧೀಶರಿಗೆ ಎಲ್ಲವನ್ನೂ ಹೇಳಿದೆ. ನನ್ನ ಮಗಳನ್ನು ಈ ಅನುಮಾನಾಸ್ಪದ ಜನರು ಕೊಂಡುಹೋಗಿ ಎಲ್ಲಾ ಕಾನೂನು ವಿರುದ್ಧ ಕಾರ್ಯಗಳಿಗೆ ಬಳಸಿಕೊಳ್ಳುತ್ತಾರೆ ಎಂದು ಹೇಳಿ ಅತ್ತುಬಿಟ್ಟೆ. ಆದರೆ ನ್ಯಾಯಾಧೀಶರು ಅವಳಿಗೆ 18 ವರ್ಷಗಳಾದುದರಿಂದ ಅವಳ ಬಗ್ಗೆ ಅವಳೇನೇ ನಿರ್ಧಾರ ಕೈಗೊಳ್ಳಬಹುದೆಂದೂ ತಾನೇನೂ ಮಾಡಲಾರೆ ಎಂದೂ ಹೇಳಿ ಇಡೀ ಪ್ರಕರಣದಿಂದ ಕೈತೊಳೆದುಕೊಂಡರು.

ಆನಂತರ ನನ್ನ ಮಗಳು ದೂರವಾಣಿಯಲ್ಲೂ ಮಾತನಾಡಲು ಸಿಗಲಿಲ್ಲ. ಕೊನೆಗೆ ಅವಳೇ ಏನಾದರೂ ಮಾತನಾಡಲಿ ಎಂದು, ನಾನೇ ನನ್ನ ಫೇಸ್‌ಬುಕ್ ತೆರೆದು ಅದರಲ್ಲಿ ಅವಳಿಗೆ ಮಾತನಾಡುವಂತೆ ಕೇಳತೊಡಗಿದೆ. 55 ದಿನಗಳ ನಂತರ ಅವಳೇ ತಾನು ಪಾಲಕ್ಕಾಡಿನಲ್ಲಿ ಗಂಡನ ಕುಟುಂಬದೊಂದಿಗೆ ಇದ್ದೇನೆ ಎಂದು ಬರೆದಳು. ಅವಳ ಆ ವಿಳಾಸವನ್ನು ಪತ್ತೆಹಚ್ಚಿ ಅಲ್ಲಿಗೂ ಹೋದೆ. ಆ ಮನೆಯವರಿಗೆ ತಮ್ಮ ಇಬ್ಬರು ಮಕ್ಕಳೂ ಕ್ರೈಸ್ತ ಮತದಿಂದ ಮುಸ್ಲಿಂ ಆದ ಬಗ್ಗೆ ಏನೂ ಬೇಸರವಿದ್ದಂತಿರಲಿಲ್ಲ.

ಒಂದು ದಿನ ನನ್ನ ಮುದ್ದಿನ ಮಗಳಾಗಿದ್ದ ನಿಮಿಷಾ ಏಕಾಏಕಿ ಮನೆಗೆ ಬಂದಳು. ಬುರ್ಖಾದಲ್ಲಿ ಮನೆಯೊಳಗೆ ಬಂದರೆ ಪರವಾಗಿಲ್ಲವೇ ಎಂದು ಕೇಳಿದಳು. ಅಯ್ಯೋ ನನ್ನ ಮಗಳು. ಅದೇ ನಿಮಿಷಾನಾ ಇವಳು ಎಂದುಕೊಳ್ಳುತ್ತಾ ಬಾ ಎಂದೆ ... (ಕೃಪೆ : ಆರ್ಗನೈಸರ್)

**– ಮುಂದುವರಿಯುವುದು –**

# ಸಾಮೂಹಿಕ ಗೌರಿ–ಗಣೇಶ ಪೂಜೆ

ಮೈಸೂರು : 12.9.17ರಂದು ಗಾಂಧಿನಗರದಲ್ಲಿ ವಿಶ್ವಹಿಂದು ಪರಿಷದ್ ಮತ್ತು ಜೈಭಾರತ್ ಸಂಘಗಳು ಆಯೋಜಿಸಿದ ಸಾಮೂಹಿಕ ಗೌರಿ ಗಣೇಶ ಪೂಜೆ ಹಾಗೂ ಬಾಗಿನ ವಿನಿಮಯ ಕಾರ್ಯಕ್ರಮವು ಸಂಭ್ರಮದಿಂದ ಜರುಗಿತು. 135ಕ್ಕೂ ಹೆಚ್ಚು ಮಾತೆಯರು ಸೇರಿದ ಈ ಕಾರ್ಯಕ್ರಮದಲ್ಲಿ ಮೈಸೂರು ಗ್ರಾಮಾಂತರ ಜಿಲ್ಲಾ ಅಧ್ಯಕ್ಷರಾದ ರೇವಣ್ಣನವರು ಭಾಗವಹಿಸಿದ್ದರು. ಮೈಸೂರು ಜಿಲ್ಲಾ ಮಾತೃಶಕ್ತಿ ಪ್ರಮುಖರಾದ ಸವಿತಾ ಘೂಟ್ಗೆಯವರೂ; ಜನಾರ್ದನರಾವ್, ವಿಶ್ವನಾಥರವರೂ ಉಪಸ್ಥಿತರಿದ್ದರು. ಪ್ರಹ್ಲಾದರವರು ಪೂಜಾ ವಿಧಿವಿಧಾನಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. **(ಭಾವಚಿತ್ರ ಮುಖಪುಟದಲ್ಲಿ)**

# ಜನಮನಗಳಲ್ಲಿ ನೆಲೆಸಿದ ಸರ್.ಎಂ. ವಿಶ್ವೇಶ್ವರಯ್ಯನವರು

**– ಟಿ.ಹೆಚ್. ರಾಮಕೃಷ್ಣ ತುರುವೇಕೆರೆ, ಜಿಲ್ಲಾ ಅಧ್ಯಕ್ಷರು**





2012ರ ಏಪ್ರಿಲ್ ತಿಂಗಳಲ್ಲಿ ನಮ್ಮ ಮನೆಯು ಗೃಹಪ್ರವೇಶವಿದ್ದಿತು. ನಮ್ಮ ಅಳಿಯ ಬದರಿನಾರಾಯಣರನ್ನು ಆಹ್ವಾನಿಸಲು ಮಂಡ್ಯಕ್ಕೆ ಹೋಗಿದ್ದೆ. ಬರುವಾಗ ಅವರ ವಾಹನದಲ್ಲಿ ಬಸರಾಳು ಮಾರ್ಗವಾಗಿ ಹೊರೆಟೆವು. ಅವರ ಪರಿಚಯದ ರೈತ ಕುಟುಂಬದವರೊಡನೆ

ವ್ಯಾವಹಾರಿಕ ಮಾತುಕತೆಗಾಗಿ ದಾರಿಯಲ್ಲಿ ಅವರ ಮನೆ ಮುಂದೆ ವಾಹನವನ್ನು ನಿಲ್ಲಿಸಿದೆವು. ಉಪಾಹಾರ ಮಾಡಲು ಸಮಯಾವಕಾಶವಿಲ್ಲದಿದ್ದುದರಿಂದ ಅಲ್ಲಿಂದ ಲಗುಬಗೆಯಿಂದ ಹೊರಡಲು ಸಿದ್ಧರಾದೆವು.

ಅಗ ಅಲ್ಲೇ ಎಲೆ ಅಡಿಕೆ ಕುಟ್ಟುತ್ತಾ ಕೂತ ಮನೆಯ ಯಜಮಾನರ ಅಜ್ಜಿ, "ಯಾಕೆ ತಿಂಡಿ ಬ್ಯಾಡಾ ಅಂತೀರಾ? ಆ ವಿಸ್ವೇಸ್ವರಪ್ಪನ ಪರ್‌ಸಾದವನ್ನು ನಮ್ಮನೇಲಿ ತಿಂದ್ ಹೋದ್ರೆ ಆ ನಮ್ಮಪ್ಪಂಗೆ ಸಂತೋಸ್ ಆಯ್ತ್ತದೆ. ಬ್ಯಾಡಾ ಅನ್ಬೇಡಿ" ಎಂದರು. ಸರ್.ಎಂ. ವಿಶ್ವೇಶ್ವರಯ್ಯ ಅವರ ಕುರಿತು ಆಕೆ ಗೌರವಾದರಗಳಿಂದ ನುಡಿದ ಮಾತುಗಳನ್ನು ಕೇಳಿದ ಮೇಲೆ ಉಪಾಹಾರವನ್ನು ಮಾಡದೆ ಮುಂದುವರಿಯಲು ಆಗಲೇ ಇಲ್ಲ.

1976ರಲ್ಲಿ ನನ್ನ ತಂಗಿಯ ವರಾನ್ವೇಷಣೆಗಾಗಿ ಭದ್ರಾವತಿಗೆ ಹೋಗಿದ್ದೆವು. ಅಲ್ಲಿ ನನ್ನ ಭಾವಿ ಭಾವನ ಕುರಿತು ವಿದ್ಯಾರ್ಹತೆಗಳನ್ನೆಲ್ಲಾ ವಿಚಾರಿಸಿ ಉದ್ಯೋಗದ ಬಗ್ಗೆ ಕೇಳಿದೆವು. ಅದಕ್ಕೆ ನಮ್ಮ ಭಾವನ ತಂದೆ, ಸಾವಿರಾರು ಕುಟುಂಬಗಳ ಆಶ್ರಯ ಸ್ಥಾನವಾಗಿರುವ ವಿಶ್ವೇಶ್ವರಯ್ಯನವರ ಛತ್ರದಲ್ಲಿ ಕೆಲಸ ಮಾಡುತ್ತಿದ್ದಾನೆ ಎಂದರು. ಅವರು ಅಷ್ಟು ಮನಮುಟ್ಟಿ ಕೃತಜ್ಞತೆಯಿಂದ ಹೇಳಿದುದು ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಕುರಿತು ಎನ್ನುವುದು ಸ್ವಲ್ಪ ವಿವರಿಸಿದ ಮೇಲೆಯೇ ತಿಳಿಯಿತು.

ಮೈಸೂರು ಸಂಸ್ಥಾನದ ಎಲ್ಲಾ ಜಿಲ್ಲೆಗಳಲ್ಲೂ ವಿಶ್ವೇಶ್ವರಯ್ಯನವರು ತಮ್ಮ ಮುಂದಾಲೋಚನೆಯಿಂದ ಸ್ಥಾಪಿಸಿದ ಸಾರ್ವಜನಿಕ ಯೋಜನೆಗಳು ಜನರ ಮನಸ್ಸಿನಲ್ಲಿ ಅಚ್ಚೊತ್ತಿ ನಿಂತವು. ಕೃಷಿಕರು, ಕಾರ್ಮಿಕರು ಎಲ್ಲರಲ್ಲೂ ಅವರ ಬಗ್ಗೆ ಕೃತಜ್ಞತೆಯ ಭಾವನೆಗಳು ಈಗಲೂ ಇವೆ.

ಭದ್ರಾವತಿಯ ಕಾರ್ಖಾನೆಯ ವಿವರಗಳನ್ನು ವಿಶ್ವೇಶ್ವರಯ್ಯನವರು ನಾಲ್ವಡಿ ಒಡೆಯರ ಮುಂದೆ ಇಟ್ಟಾಗ ಮಹಾರಾಜರು, ಅಷ್ಟೊಂದು ಭೂಮಿಯ ಅಗತ್ಯವಿದೆಯೇ ಎಂದು ಕೇಳಿದರಂತೆ. ಅದಕ್ಕೆ ದಿವಾನರು "ನಾನೀಗ ಆಲೋಚಿಸುತ್ತಿರುವುದುದ 50 ವರ್ಷಗಳ ನಂತರದ ಪೂರ್ಣ ಪ್ರಮಾಣದ ಕಾರ್ಖಾನೆಯ ಬಗ್ಗೆ" ಎಂದರಂತೆ.

ಹೀಗೆ ಪ್ರಜೆಗಳ ಭವಿಷ್ಯದ ಬಗ್ಗೆ ಯೋಚಿಸಿದ ಮಹಾರಾಜರ ಮತ್ತು ದಿವಾನರ ಪುತ್ಥಳಿಗಳು ಗ್ರಾಮ ಗ್ರಾಮಗಳಲ್ಲಿರುವುದಷ್ಟೇ ಅಲ್ಲದೆ ಎಲ್ಲರ ಹೃದಯಗಳಲ್ಲಿ ಸ್ಥಾಪನೆಯಾದುದರಲ್ಲಿ ಆಶ್ಚರ್ಯವೇನಿದೆ?

## ಭಾರತ ಮಾತಾ ಪೂಜನ



**ಚಿತ್ತಾಪುರ :** ಚಿತ್ತಾಪೂರ ವೀರಶೈವ ಸಮಾಜ ಮತ್ತು ಪುರಾಣ ಸಮಿತಿಯು ಸಹಯೋಗದೊಂದಿಗೆ ವಿಶ್ವ ಹಿಂದು ಪರಿಷತ್ ಚಿತ್ತಾಪೂರ ಘಟಕವು 'ಭಾರತ ಮಾತಾ ಪೂಜೆ ಹಾಗೂ ಸಾಮೂಹಿಕ ಆರತಿ; ಕಾರ್ಯಕ್ರಮವನ್ನು ನಡೆಸಿತು.

ಕಾರ್ಯಕ್ರಮದಲ್ಲಿ ಮುಖ್ಯ ವಕ್ತಾರರಾಗಿ ಕರ್ನಾಟಕ ದಕ್ಷಿಣ ಪ್ರಾಂತ ಮಾತೃ ಶಕ್ತಿ ಪ್ರಮುಖರಾದ ಶ್ರೀಮತಿ ಬಿ.ಎಲ್. ರಮಾರತ್ನ ಹಾಗೂ ಬೆಂಗಳೂರು ದಕ್ಷಿಣ ಮಾತೃಶಕ್ತಿ ಪ್ರಮುಖರಾದ ಶ್ರೀಮತಿ ಉಮಾ ರಾಘವೇಂದ್ರ ಭಾಗವಹಿಸಿದ್ದರು. ಕಲಬುರಗಿ ಜಿಲ್ಲಾ ಮಾತೃಶಕ್ತಿ ಪ್ರಮುಖರಾದ ಶ್ರೀಮತಿ ವೆಂಕಟಮ್ಮ ಎಂ. ಪಾಲಪ ಅಧ್ಯಕ್ಷತೆ ವಹಿಸಿದ್ದರು.

ಸಂಗಮ್ಮ ಧರಪೂರ, ಸಂಗೀತಾ ಕೊಲ್ಲೂರ್, ಸುವರ್ಣ ಸಿಂಪಿ, ಶೀಲಾ, ಕಸ್ತೂರಬಾಯಿ ಮಾಡ್ಗಿ, ತಾಯಂದಿರು ಹಾಗೂ ಹಿರಿಯರು ಮತ್ತು ಯುವಕರು ನೂರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಮಾತೃಶಕ್ತಿ ತಾಲ್ಲೂಕು ಪ್ರಮುಖರಾದ ಶ್ರೀಮತಿ ಲಕ್ಷ್ಮೀ ಮಚ್ವೆ ಕಾರ್ಯಕ್ರಮದ ವ್ಯವಸ್ಥೆ ಅಲಂಕಾರ ನೋಡಿಕೊಂಡರು. ಐಶ್ವರ್ಯ ನಿರೂಪಿಸಿದರು. ಶಿವಲೀಲಾ ಹಿರೇಮಠ ವಂದಿಸಿದರು, ಜಿಲ್ಲಾ ಕಾರ್ಯದರ್ಶಿ ಅಂಬರೀಶ ಸುಲೇಗಾಂವ ಕಾರ್ಯಾಧ್ಯಕ್ಷರಾದ ಅಶ್ವಥರಾಮ ರಾಠೋಡ, ಅಧ್ಯಕ್ಷ ಆನಂದ ಪಾಟೀಲ ಮೇಘರಾಜ ಗುತ್ತೇದಾರ, ಸಾಬಣ್ಣ ಪೂಜಾರಿ, ಮಂಜುನಾಥ ಶಾಸ್ತ್ರಿ, ಸುರೇಂದ್ರ, ಸಂತೋಷ ಹಾವೇರಿ, ಕೋಟೇಶ್ವರ ರೇಶ್ಮೆ ನಾಗರಾಜ ಹೂಗಾರ ಉಪಸ್ಥಿತರಿದ್ದರು. **(ಭಾವಚಿತ್ರ ರಕ್ಷಾಪುಟ 3)**

# ತಿರುಕೋಯಿಲೂರ

**– ಪ್ರೊ. ಪಾಂಡುರಂಗ ಜೋರಾಪುರ, ದಾವಣಗೆರೆ**



ದಿವ್ಯಕ್ಷೇತ್ರಗಳಲ್ಲಿ ಒಂದಾದ ತಿರುಕೋಯಿಲೂರ ಮುಖ್ಯವಾಗಿ ಶ್ರೀ ವೈಷ್ಣವರಿಗೆ ಪವಿತ್ರ ಕ್ಷೇತ್ರ. ಅಲ್ಲಿಯ ಒಂದು ಸಣ್ಣ ಕುಟೀರದಲ್ಲಿ ರಾತ್ರಿ ಮಳೆ ಸುರಿಯುತ್ತಿರುವಾಗ, ಮೂವರು ಆಳ್ವಾರರಿಂದ ದಿವ್ಯಪ್ರಬಂಧ ಹುಟ್ಟಿತು. ಆ ಬಡ ಕುಟೀರವು ವಿಶ್ವದ ಅಜ್ಞಾನದ ಕತ್ತಲೆಯನ್ನು ಕಳೆಯಿತೆಂದು, ವೇದಾಂತ ದೇಶಿಕರು ಸ್ತುತಿಸುತ್ತಾರೆ.

ತ್ರಿವಿಕ್ರಮನ ಅವತಾರವಾದದ್ದು ಇಲ್ಲಿಯೆ ಎಂದು ನಂಬಿಕೆ. ಅವತಾರ ಕಾಲದಲ್ಲಿ ಮೃಕಂಡು ಮುನಿ, ತಪಸ್ಸಿಗೆ ಬೇರೆ ಕಡೆ ಹೋಗಿದ್ದರು. ಅವರು ಈ ಅವಕಾಶವನ್ನು ನೋಡಲು ಆಗಲಿಲ್ಲ ಎಂದು ಹಳಹಳಿಸಿದರು. ಅದನ್ನು ಮತ್ತೊಮ್ಮೆ ತೋರಿಸಲು ತ್ರಿವಿಕ್ರಮನನ್ನು ಪ್ರಾರ್ಥಿಸಿ, ಕಠೋರ ತಪಸ್ಸು ಪ್ರಾರಂಭಿಸಿದರು. ಕೃಷ್ಣಾರಣ್ಯದಲ್ಲಿರುವ ಕೃಷ್ಣಪುರಿಯಲ್ಲಿ ನಿನ್ನ ಆಸೆ ಫಲಿಸುವುದೆಂದು ಬ್ರಹ್ಮ ಆಶ್ವಾಸನವಿತ್ತ. ಮೃಕಂಡು ಮುನ. ಅಲ್ಲಿ ಕುಟೀರ ಕಟ್ಟಿಕೊಂಡು ಇರಲು ಪ್ರಾರಂಭಿಸಿದ.

ಒಂದು ದಿನ ವೃದ್ಧದಂಪತಿಗಳು ಬಂದು, ನಮಗೆ ಬಹಳ ಹಸಿವೆ, ಭೋಜನಕ್ಕೇನಾದರೂ ಮಾಡೆಂದರು. ಮನೆಯಲ್ಲಿ ಏನೂ ಇಲ್ಲ ಎಂದು ಗೊತ್ತಿದ್ದರೂ, ಮೃಕಂಡು ಮುನಿ ಅತಿಥಿಸತ್ಕಾರದ ವ್ಯವಸ್ಥೆ ಮಾಡಲು ಹೆಂಡತಿಗೆ ಹೇಳಿದರು. ಅವಳು ಮಹಾಲಕ್ಷ್ಮೀಯನ್ನು ಪ್ರಾರ್ಥಿಸಿದಳು. ಅಡುಗೆ ಮಾಡಿ ಅತಿಥಿಗಳನ್ನು ತೃಪ್ತಿಪಡಿಸಿದಳು. ಆಗ ಆ ವೃದ್ಧನು ಶಂಖಚಕ್ರ ಗದಾ ಧಾರಿಯಾಗಿ ಮಹಾಲಕ್ಷ್ಮೀ ಸಹಿತ ದರ್ಶನವನ್ನು ಕೊಟ್ಟ. ತ್ರಿವಿಕ್ರಮರೂಪವನ್ನೂ ತೋರಿಸಲು ಮೃಕಂಡು ಮುನಿ ಪ್ರಾರ್ಥಿಸಿದ. ಆ ರೂಪವನ್ನು ತೋರಿಸಿದ್ದು ತಿರುಕೋಯಿಲೂರಿನಲ್ಲಿ ಎಂದು ನಂಬಿಕೆ. ಎಲ್ಲ ಭಕ್ತರನ್ನು ಅನುಗ್ರಹಿಸಲು ಇಲ್ಲಿಯೆ ನೆಲೆಸೆಂದು ಮೃಕಂಡು ಮುನಿ ಪ್ರಾರ್ಥಿಸಿದನು. ವಿಷ್ಣು ಒಪ್ಪಿ ಅಲ್ಲಿಯೇ ನೆಲೆಸಿದ.

ತ್ರಿವಿಕ್ರಮನ ಒಂದು ಪಾದವು ಬ್ರಹ್ಮಲೋಕವನ್ನು ಸ್ಪರ್ಶಿಸಿದಾಗ, ಬ್ರಹ್ಮ ಅವನ ಪಾದಪೂಜೆ ಮಾಡಿದ ಆ ನೀರು ಇಲ್ಲಿ ಸಂಗ್ರಹವಾಗಿ ಚಕ್ರತೀರ್ಥ ಆಯಿತು. ದುರ್ವಾಸರಿಂದ ಶಾಪಗ್ರಸ್ತನಾಗಿ ತನ್ನ ಐಶ್ವರ್ಯಕಳೆದುಕೊಂಡ ಇಂದ್ರ ಇಲ್ಲಿ ಬಂದು ತ್ರಿವಿಕ್ರಮನನ್ನು ಪೂಜಿಸಿ, ಐಶ್ವರ್ಯವನ್ನು ಮರಳಿ ಪಡೆದನು. ತಿರುಕೋಯಿಲೂರಿನಲ್ಲಿ ತಮಿಳು ನಾಡಿನ ಎಲ್ಲ ದೇವಸ್ಥಾನಗಳಂತೆ,



ಭವ್ಯಗೋಪುರ, ವಿಶಾಲ ಮುಖ ಮಂಟಪ, ನೃತ್ಯಮಂಟಪಗಳಿವೆ. ಗರ್ಭಗುಡಿಯಲ್ಲಿ ಬಲಕಾಲನ್ನು ಮೇಲೆ ಎತ್ತಿನಿಂತಿರುವ ಸುಂದರ ವಿಷ್ಣುವಿನ ಮೂರ್ತಿ ಇದೆ. ಈ ದೇವಸ್ಥಾನದ ಬಹುಭಾಗ ನಾಯಕರ ಆಳಿಕೆಯಲ್ಲಿ ನಿರ್ಮಾಣವಾಯಿತು.

ಮಾಧ್ವಯತಿಗಳಾದ ಭಾವ ಬೋಧಕರೆಂದು ಹೆಸರಾದ ಶ್ರೀ ರಘೂತ್ತಮ ತೀರ್ಥರ ಮತ್ತು ಸತ್ಯಪ್ರಮೋದ ತೀರ್ಥರ ವೃಂದಾವನಗಳು ಇರುವುದರಿಂದ ಮಾಧ್ವ ಸಂಪ್ರದಾಯದ ಭಕ್ತರಿಗೂ ಇದು ಪವಿತ್ರ ಕ್ಷೇತ್ರ.

# ಸ್ಥಾಪನಾದಿನ

**ತುರುವೇಕೆರೆ :** 20.08.2017 ಭಾನುವಾರದಂದು ನಗರದ ಶ್ರೀ ಸತ್ಯಗಣಪತಿ ಆಸ್ಥಾನ ಮಂಟಪದಲ್ಲಿ ಜಿಲ್ಲಾ ವಿಶ್ವಹಿಂದು ಪರಿಷದ್ ಅಧ್ಯಕ್ಷರಾದ ಟಿ.ಹೆಚ್. ರಾಮಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಸ್ಥಾಪನಾ ದಿನದ ಉತ್ಸವವು ನಡೆಯಿತು. ನಿವೃತ್ತ ಬ್ಯಾಂಕ್ ಅಧಿಕಾರಿಗಳಾದ ಆರ್. ಮೂಡಲಗಿರಯ್ಯನವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

82 ಬಾಲಕ ಬಾಲಿಕೆಯರು ಕೃಷ್ಣ ವೇಷಧಾರಿಗಳಾಗಿ ಭಾಗವಹಿಸಿದರು. 5 ಪ್ರೌಢಶಾಲಾ ವಿದ್ಯಾರ್ಥಿಗಳು ನೃತ್ಯಸ್ಪರ್ಧೆಯಲ್ಲಿ ಭಾಗವಹಿಸಿದರು. ಭಗವದ್ಗೀತಾ ಕಂಠಪಾಠ ಮತ್ತು ರಾಧಾ ಕೃಷ್ಣರ ಕಥೆ ಹೇಳುವ ಸ್ಪರ್ಧೆಗಳೂ ಇದ್ದುವು. ಶ್ರೀ ಸತ್ಯಗಣಪತಿ ಸೇವಾ ಸಮಾಜದ ಅಧ್ಯಕ್ಷರಾದ ಆರ್. ಮಲ್ಲಿಕಾರ್ಜುನ್‌ರವರು ಎಲ್ಲಾ ವಿಜೇತರಿಗೆ ಬಹುಮಾನಗಳನ್ನು ವಿತರಿಸಿದರು. ಉಷಾ ಶ್ರೀನಿವಾಸರವರು ನಿರ್ದೇಶಿಸಿದ ಕಾರ್ಯಕ್ರಮಗಳನ್ನು ರೂಪಾರವರು ನಿರೂಪಿಸಿದರು. ಎನ್. ಯತೀಶರವರು ಎಲ್ಲರನ್ನೂ ಸ್ವಾಗತಿಸಿದರು. ವಂದನಾರ್ಪಣೆಯನ್ನು ಟಿ.ಎ. ರಂಗನಾಥರವರು ಅರ್ಪಿಸಿದರು. **(ಭಾವಚಿತ್ರ ಮುಖಪುಟದಲ್ಲಿ)**

**– ಟಿ. ರಾಮಚಂದ್ರ ತುರುವೇಕೆರೆ**

**ವಿಶ್ವ ಹಿಂದು ಪರಿಷದ್ ಮಾಹಿತಿ ಮತ್ತು ಹಿಂದುವಾಣಿ E ಪತ್ರಿಕೆಗಾಗಿ**
**www.vhp.org**

# ಆಕೆಗೆ ಏನು ಮಾಡಬೇಕೆಂದು ಯಾರೂ ಹೇಳಬಾರದಂತೆ !

**ಪ್ರೇಮಾನಂದ ಶೆಟ್ಟಿ, ಕುಂದಾಪುರ**



ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಗೆ ಕಲ್ಕತ್ತಾ ಉಚ್ಚನ್ಯಾಯಾಲಯವು ಅಧಿಕಾರ ನಡೆಸುವವರು ನಿಷ್ಪಕ್ಷಪಾತಿಗಳಾಗಿರುವ ಅಗತ್ಯವನ್ನು ಮನದಟ್ಟು ಮಾಡಲು ತನ್ನ ತೀರ್ಪಿನ ಮೂಲಕ ಪ್ರಯತ್ನಿಸಿತು.

ಅದಕ್ಕೆ ಪ್ರತಿಯಾಗಿ ಮಮತಾರವರು "ನನ್ನ ಗಂಟಲನ್ನು ಸೀಳಿದರೂ ಸರಿಯೇ ನಾನೇನು ಮಾಡಬೇಕೆಂದು ನನಗೆ ಯಾರೂ ಹೇಳುವಂತಿಲ್ಲ" ಎಂದು ಶೌರ್ಯಪ್ರದರ್ಶನ ಮಾಡಿದರು. ಆದರೆ ಆ ಕೂಡಲೇ ಅಧಿಕಾರಿಗಳನ್ನು ಕರೆದು ನ್ಯಾಯಾಲಯದ ತೀರ್ಪಿನಂತೆ ನಡೆಯಲು ಆದೇಶ ನೀಡಿದರು.

ನ್ಯಾಯಾಲಯದ ಮುಂದೆ ಬಂದ ಪ್ರಕರಣ ಹೀಗಿತ್ತು. ಬಂಗಾಳದ ಪ್ರಮುಖ ಹಬ್ಬ ದುರ್ಗಾಷ್ಟಮಿ. ದುರ್ಗೆಯ ಪ್ರತಿಮೆಗಳ ವಿಸರ್ಜನೆಯು ದಶಮಿ ತಿಥಿಯ ನಂತರ ಪ್ರಾರಂಭವಾಗುತ್ತದೆ. ಮಮತಾ ಬ್ಯಾನರ್ಜಿ ಹಿಂದು ಸಮಾಜಕ್ಕೆ ತನ್ನ ಫರ್ಮಾನು ಹೊರಡಿಸಿ ದುರ್ಗಾ ವಿಸರ್ಜನೆಯನ್ನು ವಿಜಯದಶಮಿಯ ದಿನ (ಸೆಪ್ಟೆಂಬರ್ 30) ರಾತ್ರಿ 10ರೊಳಗೆ ಮುಗಿಸಿಬಿಡಬೇಕು. ಇಲ್ಲದಿದ್ದರೆ ಮರುದಿನ ಮುಸ್ಲಿಮರ ರಂಜಾನ್ ಆಚರಣೆಗೆ ದುರ್ಗಾಪೂಜೆಯ ಸಂಭ್ರಮವು ಅಡ್ಡಿಯಾಗಲಿದೆ ಎಂದರು.

ಈ ಆಜ್ಞೆಯ ವಿರುದ್ಧ ದಾಖಲುಗೊಂಡ ಪ್ರಕರಣದ ತೀರ್ಪು ಮಮತಾ ಬ್ಯಾನರ್ಜಿಗಷ್ಟೇ ಅಲ್ಲ ಹಿಂದುಗಳನ್ನು ದಮನಿಸುವ ಎಲ್ಲಾ ಸರ್ಕಾರಗಳಿಗೂ ಒಂದು ಉತ್ತಮ ಪಾಠವಾಗಿದೆ. ಮುಖ್ಯ ನ್ಯಾಯಮೂರ್ತಿ ರಾಕೇಶ್ ತ್ರಿಪಾಠಿ ಮತ್ತು ಹರೀಶ ಟಂಡನ್‌ರ ಪೀಠವು ದುರ್ಗಾವಿಸರ್ಜನೆಯನ್ನು ದಶಮಿಯಂದು ಮಾತ್ರವಲ್ಲದೆ ಮುಂದಿನ ದಿನಗಳಲ್ಲೂ ಮುಂದುವರಿಸಲು ಅನುಮತಿ ನೀಡಿತು.

ಮುಂಬಯಿ ಪೊಲೀಸರಿಂದ ಧಾರ್ಮಿಕ ಮೆರವಣಿಗೆಗಳನ್ನು ನಿಯಂತ್ರಿಸುವ ಕ್ರಮಗಳನ್ನು ಕಲಿತುಕೊಳ್ಳಿ ಎನ್ನುತ್ತಾ ಗಣೇಶ ವಿಸರ್ಜನೆಯನ್ನೂ ಮೊಹರಂ ಮೆರವಣಿಗೆಯನ್ನು ಒಟ್ಟೊಟ್ಟಿಗೆ ನಡೆಸಲು ನಿರ್ಬಂಧಿಸದ ಮುಂಬೈ ಪೊಲೀಸ್ ಇಲಾಖೆಯ ಅನುಭವವನ್ನು ನ್ಯಾಯಾಲಯವು ಉಲ್ಲೇಖಿಸಿತು.

'ನೀವು ಅಧಿಕಾರ ನಡೆಸುವ ಸರ್ಕಾರ ಎಂದ ಮಾತ್ರಕ್ಕೆ ಏಕಪಕ್ಷೀಯವಾಗಿ ನಿರ್ಧಾರ ಕೈಗೊಳ್ಳಬಹುದೇ? ಯಾವುದೇ ಕಾರಣವಿಲ್ಲದೆ ನೀವು ಅನಗತ್ಯ ಅಧಿಕಾರವನ್ನು ಚಲಾಯಿಸುತ್ತಿದ್ದೀರಿ. ಉದಾಹರಣೆಗೆ ಜನಜಂಗುಳಿಯು ನಿಯಂತ್ರಣವನ್ನು ಮೀರುತ್ತಿದೆಯೆಂದಾಗ ಪೊಲೀಸರು ಗುಂಪಿನ ಮನವೊಲಿಸಲು ಪ್ರಯತ್ನಿಸುವರು. ಆಗದಿದ್ದರೆ ಜಲಫಿರಂಗಿಯನ್ನು ಉಪಯೋಗಿಸುವರು ಹಾಗೂ ಆಗಲಿಲ್ಲವೆಂದಾಗ ಲಾಠಿಚಾರ್ಜ್ ಮಾಡುವರು. ಹೀಗೆ ಒಂದೊಂದೇ ಹೆಜ್ಜೆಯಲ್ಲಿ ಕ್ರಮಗಳು ಮುಂದುವರಿಯಬೇಕು. ಪೊಲೀಸರು ಮೊದಲ ಬಾರಿಗೇನೇ ಗುಂಡು ಹಾರಿಸುವ ನಿರ್ಧಾರ ಕೈಗೊಳ್ಳರು. ನೀವಂತೂ ಈ ಸಂದರ್ಭದಲ್ಲಿ ಕೊನೆಯ, ಕಟು ನಿರ್ಧಾರವನ್ನೇ ಮೊದಲು ಕೈಗೆತ್ತಿಕೊಂಡಿರುವಿರಿ' ಎಂದು ನ್ಯಾಯಾಲಯವು ಟೀಕಿಸಿತು. ಸರ್ಕಾರ ತನ್ನ ಅಧಿಕಾರವನ್ನು ಚಲಾಯಿಸಿ ಊಹಾಪೋಹಗಳನ್ನು ಆಧರಿಸಿ ನಾಗರಿಕರ ಧಾರ್ಮಿಕ ಆಚರಣೆಯ ಹಕ್ಕುಗಳನ್ನು ನಿರ್ಬಂಧಿಸುವಂತಿಲ್ಲ. ಸೌಹಾರ್ದದಿಂದ ಬದುಕಬಯಸುವವರ ನಡುವೆ ವಿಭಜನೆಯ ಗೆರೆಯನ್ನು ಎಳೆಯಬೇಡಿ. ಏಕಪಕ್ಷೀಯ ನಿರ್ಧಾರ ಗಳನ್ನು ತೆಗೆದುಕೊಳ್ಳುವುದನ್ನು ಬಿಟ್ಟು ನಿಮ್ಮ ನಿರ್ಧಾರಕ್ಕೆ ಏನಾದರೂ ಪಕ್ಕಾ ಕಾರಣಗಳಿದ್ದರೆ ಅವನ್ನು ಇಲ್ಲಿ ಬಹಿರಂಗ ಪಡಿಸಿರಿ ಎನ್ನುತ್ತಾ ಸರ್ಕಾರವು ಎಲ್ಲಾ ಸರ್ಕಾರಗಳಿಗೂ ಸಮಯೋಜಿತ ಸೂಚನೆಯನ್ನು ನೀಡಿದೆ. ಇದಕ್ಕೆ ಮಮತಾರವರು ಮೋದಿ ಸರ್ಕಾರವನ್ನು ತನ್ನ ವಿರುದ್ಧ ಪಿತೂರಿ ನಡೆಸುತ್ತಿರುವುದಾಗಿ ಟೀಕಿಸಿದರು. ತಾನೂ ಯಾರ ಓಲೈಕೆಯನ್ನು ಮಾಡುತ್ತಿಲ್ಲವೆಂದೂ ಹೇಳಿದರು. ಹೇಗಿದೆ ನೋಡಿ ಆಳುವವರ ಅಹಂಕಾರ.

## ಸತ್ಸಂಗ ವಾರ್ಷಿಕೋತ್ಸವ

**ಕೆಂಗೇರಿ ಬೆಂಗಳೂರು :** 14.08.2017ರಂದು ಪ್ರೇರಣಾ ಸತ್ಸಂಗದ ವಾರ್ಷಿಕೋತ್ಸವದ ಪ್ರಮುಖ ಭಾಷಣಕಾರರಾಗಿ ಮಹಾನಗರ ಧರ್ಮಾಚಾರ್ಯ ಸಂಪರ್ಕ ಪ್ರಮುಖರಾದ ಲಕ್ಷ್ಮೀಕಾಂತರವರು ಆಗಮಿಸಿದ್ದರು. ಗ್ಯಾಲಕ್ಷಿ ವಸತಿ ಸಮುಚ್ಛಯದ ವಸಂತ ತಮ್ಮಣ್ಣರಾವ್ ಮುತಾಲಿಕರವರು ದೀಪ ಬೆಳಗಿಸಿ ಉತ್ಸವವನ್ನು ಉದ್ಘಾಟಿಸಿದರು. ಹಿರಿಯ ಕಾರ್ಯಕರ್ತರಾದ ನಾರಾಯಣ ಸ್ವಾಮಿಯವರು ದೇಶಭಕ್ತಿ ಗೀತೆಯನ್ನು ಹೇಳಿಕೊಟ್ಟರು. ಕಳೆದ ವರ್ಷದ ವರದಿಯನ್ನು ಬಸ್ತಿಕ್‌ರವರು ಸಭೆಯ ಮುಂದಿಟ್ಟರು. ಕೆ. ಅಶ್ವತ್ಥನಾರಾಯಣರವರು ಸ್ವಾಗತಿಸಿ ವೇದಿಕೆಯಲ್ಲಿದ್ದವರನ್ನು ಪರಿಚಯಿಸಿದರು.ವಾರದಲ್ಲಿ 5 ದಿನಗಳ ಕಾಲನಿರಂತರವಾಗಿ ನಡೆಯುತ್ತಿರುವ ಸತ್ಸಂಗದ ಬೆಳವಣಿಗೆಯನ್ನು ಅಧ್ಯಕ್ಷರು ಶ್ಲಾಘಿಸಿದರು. ಮಧುಸೂದನರವರು ವಂದಿಸಿ ಸಾಮೂಹಿಕ ಆರತಿ ಮತ್ತು ಗೀತೆಗಳೊಡನೆ ಕಾರ್ಯಕ್ರಮವು ಸಂಪನ್ನಗೊಂಡಿತು.

ಇದೇ ವೇದಿಕೆಯಲ್ಲಿ 15.08.2017ರಂದು ಸ್ವಾತಂತ್ರ್ಯ ದಿನಾಚರಣೆಯ ಉತ್ಸವವೂ ನಡೆಯಿತು. ಅಶ್ವತ್ಥನಾರಾಯಣರವರು ಧ್ವಜಾರೋಹಣವನ್ನು ನೆರವೇರಿಸಿದರು. ಡಾ. ವೀಣಾರವರು ದೇಶಕ್ಕಾಗಿ ದುಡಿದ ಮಡಿದ ಮಹಾತ್ಮರನೇಕರನ್ನು ನೆನಪಿಸಿ ದಿನದ ಮಹತ್ವವನ್ನು ವಿವರಿಸಿದರು.

# ಬಾಳ ತೆರೆಯನ್ನು ಎಳೆದು ನಿರ್ಗಮಿಸಿದ ಬಾಳಪ್ಪ

## 1914–2017

**ಶಾರದಾ ಶಾಮಣ್ಣ, ಬೆಂಗಳೂರು**



ಚಿಕ್ಕಗ್ರಾಮದಲ್ಲಿ ಜನಿಸಿ ದೊಡ್ಡ ಹೆಸರನ್ನು ಮಾಡಿದ ನಟ ಶ್ರೇಷ್ಠ ಕಲಾವಿದ ಗಾಯಕ, ನಿರ್ದೇಶಕ, ಸ್ತ್ರೀಪುರುಷ ಉಭಯ ಪಾತ್ರಗಳ ಅಭಿನಯ ಪ್ರವೀಣ ಏಣಗಿ ಬಾಳಪ್ಪನವರು ಕಳೆದವಾರ ತಮ್ಮ ಹುಟ್ಟೂರಿನಲ್ಲಿ ನಿಧನರಾದರು.

ಬಾಲ್ಯದಿಂದಲೇ ಗಾಯನ, ಅಭಿನಯದಲ್ಲಿ ಅಭಿರುಚಿ ಇದ್ದ ಬಾಳಪ್ಪನವರಿಗೆ ದೇವರು ಕೊಟ್ಟ ಸ್ಫುರದ್ರೂಪ ಇಮ್ಮಡಿ ವರವಾಗಿ ಪರಿಣಮಿಸಿದ್ದಿತು. ಪ್ರಾರಂಭದಲ್ಲಿ ಪಾದುಕಾ ಪಟ್ಟಾಭಿಷೇಕದ ನಾಯಕ ಭರತನ ಪಾತ್ರದಿಂದ ಅವರು ಹಂತಹಂತವಾಗಿ ಮೇಲೇರತೊಡಗಿದರು. ಆ ಕಾಲಕ್ಕೆ ಅಂದರೆ ಸುಮಾರು 1930ರ ದಶಕದಲ್ಲಿ ತನ್ನ ರಂಗಸಜ್ಜಿಕೆ, ಕಣ್ಣುಕೋರೈಸುವ ವೇಷಭೂಷಣ, ಮನಸೂರೆಗೊಳ್ಳುವ ಹಾಡಿನ ರಸಧಾರೆ, ಬಣ್ಣದ ಬೆಳಕು, ಇವುಗಳಿಂದ ಅಲಂಕೃತವಾಗಿದ್ದ ವಾಣೀವಿಲಾಸ ಸಂಗೀತ ನಾಟಕ ಮಂಡಳಿಯು ತನ್ನ ಅದ್ಧೂರಿತನಕ್ಕೆ ಮತ್ತು ಪ್ರಯೋಗಶೀಲತೆಗೆ ಹೆಸರಾಗಿದ್ದಿತು. ಈ ನಾಟಕ ಮಂಡಳಿ ಸೇರಿದ ಯುವಕ ಬಾಳಪ್ಪ ರಂಗಸಂಗೀತದ ಪಟ್ಟುಗಳನ್ನು ಕರಗತ ಮಾಡಿಕೊಂಡು ತಮ್ಮ ಮಧುರ ಕಂಠದಿಂದ ಸ್ತ್ರೀ, ಚಲ್ತಿದುನಿಯಾ, ವೀರರಾಣಿ, ರುದ್ರಮ್ಮನ ಪಾತ್ರದಲ್ಲಿ ಜನರ ಪ್ರಶಂಸೆಗೆ ಒಳಗಾದರು. ಹಿಂದಿ ಚಲನಚಿತ್ರ ಗಾಯಕಿಯರಾದ ಲತಾ ಮಂಗೇಶ್ಕರ್, ಆಶಾ ಭೌಸ್ಲೆಯವರಿಂದಲೂ ಸೈ ಎನಸಿಕೊಂಡಿದ್ದರು. ಸ್ತ್ರೀ ಪುರುಷ ಸೇರಿದಂತೆ ಎಲ್ಲಾ ಪಾತ್ರಗಳಲ್ಲೂ ಪರಿಣಿತರಾದ ಬಾಳಪ್ಪ ಪಾಲುದಾರಿಕೆಯಲ್ಲಿ ಮೂರು ದಶಕ, ನಂತರ ಸ್ವಂತ ನಾಯಕ ಕಂಪನಿ ಕಲಾ ವೈಭವ ಸ್ಥಾಪಿಸಿ ನಾಲ್ಕು ದಶಕ ನಡೆಸಿದರು. ಅಭಿನೇತ್ರಿ ಲಕ್ಷ್ಮೀಬಾಯಿಯವರು ನಟಿಯಾಗಿ, ಪತ್ನಿಯಾಗಿ ಬಂದನಂತರ ಬಾಳಪ್ಪ ಮಾಡುತ್ತಿದ್ದ ಎಲ್ಲಾ ಸ್ತ್ರೀ ಪಾತ್ರಗಳೂ ಆಕೆಯ ಪಾಲಾಯಿತು.

'ಜಗಜ್ಯೋತಿ ಬಸವೇಶ್ವರ' ನಾಟಕವು ಬಾಳಪ್ಪನವರ ಜೀವನದ ಪ್ರಮುಖ ಮೈಲಿಗಲ್ಲು. ಹುಬ್ಬಳ್ಳಿ ಮತ್ತಿತರ ಕಡೆಗಳಲ್ಲಿ ಈ ನಾಟಕವು 300ಕ್ಕೂ ಮೀರಿ ಪ್ರದರ್ಶನಗೊಂಡವು. ಏಣಗಿಯುವರು ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದರು. ರಂಗಭೂಮಿಯಲ್ಲಿ ವ್ಯಸ್ತವಾಗಿದ್ದುಕೊಂಡೇ ಹೇಗೆ ದೇಶಪ್ರೇಮವನ್ನು ತೋರಿಸಿದರೆಂಬುದಕ್ಕೆ ಒಂದು ಸ್ವಾರಸ್ಯಕರ ಪ್ರಸಂಗ. ಅದು ಹೀಗಿದೆ. ಆಗ 1942ರ ಕ್ವಿಟ್ ಇಂಡಿಯಾ, ಚಲೇಜಾವ್ ಚಳುವಳಿಯ ಕಾಲ. ದೇಶ ನಾಯಕರ ಭಾಷಣ ಕೇಳಿ ಸಹಸ್ರ ಸಂಖ್ಯೆಯಲ್ಲಿ ಗ್ರಾಮೀಣರು ಸೈನ್ಯಕ್ಕೆ ಸೇರುತ್ತಾರೆ.

ವಿದೇಶೀ ಬಟ್ಟೆ, ವಿದೇಶೀ ಪೀಠೋಪಕರಣಗಳನ್ನು ಧ್ವಂಸ ಮಾಡಿದ ಯುವಕರು ತಮ್ಮನ್ನು ಅರಸುತ್ತಾ ಬಂದ ಪೊಲೀಸರನ್ನು ದಿಕ್ಕು ತಪ್ಪಿಸುತ್ತಾರೆ. ಪೊಲೀಸರ ಕೈಯಿಂದ ತಪ್ಪಿಸಿಕೊಳ್ಳಲು ಹರತಾಳ ಮಾಡಿದ 4–5 ಯುವಕರು ದಿಢೀರನೆ ನಾಟಕವಾಡುತ್ತಿದ್ದ ಸ್ಥಳಕ್ಕೆ ಬಂದು ಬಿಟ್ಟರು. ಇದನ್ನು ಗಮನಿಸಿದ ಬಾಳಪ್ಪನವರು ಕೂಡಲೇ ಅವರುಗಳನ್ನು ನೇಪಥ್ಯಕ್ಕೆ ಕರೆದುಕೊಂಡು ಹೋಗಿ ಅವರುಗಳಿಗೆ ಮೀಸೆ ಗಡ್ಡ ಕಟ್ಟಿ ಬಣ್ಣ ಬಳಿದು ಒಂದಿಬ್ಬರನ್ನು ಪರದೆ ಎಳೆಯುವವರಂತೆ ಮುಖಮಾಡಿ ನಿಲ್ಲಿಸಿದರು. ಉಳಿದವರಿಗೆ ಪೇಟಾ ಕಟ್ಟಿ, ಹಣೆಗೆ ದೊಡ್ಡ ದೊಡ್ಡ ನಾಮಬಳಿದು ಆಗ ನಡೆಯುತ್ತಿದ್ದ ರಾಜನ ಒಡ್ಡೋಲಗದಲ್ಲಿ ಸಭಿಕರಂತೆ ಕುಳ್ಳಿರಿಸಿದರು. ಪೊಲೀಸರಿಗೆ ಈ ಸುಳಿವು ಗೊತ್ತಾಗದೆ ಬಂದ ದಾರಿಗೆ ಸುಂಕವಿಲ್ಲವೆಂದು ಹೋಗುತ್ತಾರೆ. ಈ ರೀತಿಯ ಸಮಯೋಚಿತ ಬುದ್ಧಿಯು ಅವರ ದೇಶಭಕ್ತಿಗೆ ಸಾಕ್ಷಿಯಾಗಿ ನಿಲ್ಲುತ್ತದೆ.

ಬಾಳಪ್ಪನವರು ಕನ್ನಡಪ್ರೇಮಿ ಆಗಿದ್ದರು. ಸಾಹಿತ್ಯ ಕಲಾ ಸರಸ್ವತಿಯು ತನ್ನ ಅಂಶಗಳಾದ ಸಂಗೀತ, ಅಭಿನಯ, ವಾಕ್‌ಚಾತುರ್ಯ, ಸೌಂದರ್ಯ, ಎಲ್ಲವನ್ನೂ ತನ್ನ ಬೊಗಸೆಯಲ್ಲಿ ತುಂಬಿ ಬಾಳಪ್ಪನವರನ್ನು ಹರಸಿದ್ದಳಾದರೂ, ಅವಳ ಸಹೋದರಿ ಸಿರಿಲಕ್ಷ್ಮೀದೇವಿ ಅದೇಕೋ ಮುನಿಸಿಕೊಂಡು ಸ್ವಲ್ಪ ದೂರವೇ ನಿಂತಿದ್ದಳು. ಆದರೂ ಬಾಳಪ್ಪನವರು ಎದೆಗುಂದಲಿಲ್ಲ. ಜೋಳಿಗೆ ಹಿಡಿದು ಹಣ ಸಂಗ್ರಹಿಸಿ ಅದನ್ನು ಕನ್ನಡ ಸಾರಸ್ವತ ಲೋಕಕ್ಕೆ ಅರ್ಪಿಸಿದರು. ಪ್ರಥಮವಾಗಿ ವಚನಗಳನ್ನು ಸಂಗ್ರಹಿಸಿ ವಚನ ಪಿತಾಮಹನೆಂದೇ ಹೆಸರಾದ ಫ.ಗು. ಹಳಕಟ್ಟಿ ಹಾಗೂ ರೆವರೆಂಡ್ ಉತ್ತಂಗಿ ಚೆನ್ನಪ್ಪ ಅವರುಗಳಿಗೆ ಅದರ ಪ್ರಕಟಣೆಗಾಗಿ ಸಮರ್ಪಿಸಿದರು.

ಕನ್ನಡದ ರಂಗಗೀತೆಗಳಲ್ಲಿ ಗಾಯನಪ್ರಧಾನವಾದ ಜೊತೆ ಸಾಹಿತ್ಯಕ್ಕೂ ಹಾಗೆಯೇ ನಾಟಕದ ಸಂಭಾಷಣೆಗಳಲ್ಲಿ ಸ್ಪಷ್ಟ ಉಚ್ಚಾರಣೆಗೂ ಅವರು ಆದ್ಯತೆ ನೀಡಿದ್ದರು. ಕನ್ನಡ ಸಾರಸ್ವತ ಪ್ರಪಂಚದ ಚಿಂತಕರು, ಸಾಹಿತಿಗಳು, ಪರ್ತಕರ್ತರು, ಕಲಾವಿದರೊಂದಿಗೆ ನಿಕಟ ಸಂಪರ್ಕವೇರ್ಪಡಿಸಿಕೊಂಡಿದ್ದರು. "ನಡೆದಾಡುವ ರಂಗಭೂಮಿಯ ವಿಶ್ವಕೋಶ"ವೇ ಅವರಾಗಿದ್ದರು.

ರಂಗಭೂಮಿಯ ಏಳಿಗೆಗಾಗಿ ಬಾಳಿದ ಏಣಗಿ ಬಾಳಪ್ಪನವರು ಪೂರ್ಣಾಯಸ್ಸಿನ ತುಂಬುಕುಟುಂಬಿ. ತಮ್ಮ ಹುಟ್ಟೂರು ಬೆಳಗಾವಿಯ ಏಣಗಿ ಗ್ರಾಮದಲ್ಲಿ ಇತ್ತೀಚೆಗೆ ನಿಧನರಾದರು.

ಇದೋ ಈ ಲೇಖನದಿಂದ ಅವರಿಗೆ ನಮನಗಳು.

**ಹಿಂದುವಾಣಿಗೆ ಚಂದಾದಾರರಾಗಲು**

ಎಂ.ಓ./ಡಿ.ಡಿ.ಗಳನ್ನು **"ಹಿಂದುವಾಣಿ"** ಹೆಸರಿನಲ್ಲಿ ಕಳುಹಿಸಬಹುದು ಅಥವಾ

**ಕರ್ನಾಟಕ ಬ್ಯಾಂಕ್,** ಚಾಮರಾಜಪೇಟೆ ಶಾಖೆ, ಬೆಂಗಳೂರು

ಖಾತೆ ಹೆಸರು : "ಹಿಂದುವಾಣಿ" A/c No: 0582500102391901ಕ್ಕೆ ವರ್ಗಾಯಿಸಬಹುದು.

I.F.S.C Code : KARB0000058

ನಂತರ 7760519159 ಮೊಬೈಲ್‌ಗೆ ಮೆಸೇಜ್ ಮೂಲಕ ಅಥವಾ

ದೂರವಾಣಿಯ ಮೂಲಕ ತಮ್ಮ ಪೂರ್ಣ ವಿಳಾಸವನ್ನು ತಿಳಿಸಬೇಕು.

# ಜನತೆಯ ರಾಣಿ ಅಹಲ್ಯಾಬಾಯಿ ಹೋಳ್ಕರ್

ಎಂ.ಎಸ್. ಉಮಾ, ಬನಶಂಕರಿ, ಬೆಂಗಳೂರು



" ಕವಿಗಳೇ ನಿಮ್ಮ ಕವನದಲ್ಲಿ ನನ್ನ ಕುರಿತು ಇರುವ ಹೊಗಳಿಕೆಯನ್ನು ಬಿಟ್ಟರೆ ಮತ್ತೇನಿದೆ? ಮನುಷ್ಯರನ್ನು ಹಾಡಿ ಹೊಗಳುವುದರಲ್ಲಿ ನಿಮ್ಮ ಪ್ರತಿಭೆಯನ್ನು ವ್ಯರ್ಥಗೊಳಿಸಬೇಡಿ. ಅದರ ಬದಲು ದೇವರನ್ನು ಬಣ್ಣಿಸಿ ಬರೆಯಿರಿ" ಎಂದು ಬುದ್ಧಿ ಹೇಳಿದವಳು ಇಂದೋರಿನ ರಾಣಿ ಅಹಲ್ಯಾ ಬಾಯಿ ಹೋಳ್ಕರ್, ಆಕೆಯ ಆಸ್ಥಾನವು ಕಲಾವಿದರಿಗೂ, ವಿದ್ವಾಂಸರಿಗೂ ಸಂಗೀತಗಾರರಿಗೂ ಆಶ್ರಯ ಸ್ಥಾನವಾಗಿದ್ದಿತು. ಆದರೆ ತನ್ನ ಬಗ್ಗೆ ಬರೆದ ಸಾಹಿತ್ಯವನ್ನು ನರ್ಮದಾ ನದಿಗೆ ಬಿಸಾಡುವಂತೆ ಆಕೆ ಆಜ್ಞಾಪಿಸುತ್ತಿದ್ದಳು.

ಔರಂಗಬಾದ್ ಜಿಲ್ಲೆಯ ಚೌಂದಿ ಎನ್ನುವ ಹಳ್ಳಿಯ ಪಟೇಲ ಮಂಕೋಜಿ ಸಿಂಧೆಯು ಕೊಲ್ಲಾಪುರ ದೇವಿ ಮಹಾಲಕ್ಷ್ಮೀ ಕೃಪೆಯಿಂದಲೇ ಅಹಲ್ಯೆಯು ತನಗೆ ಮಗಳಾಗಿ ಹುಟ್ಟಿದಳು ಎಂದು ನಂಬಿದ್ದ. ಉತ್ತರ ಭಾರತದ ಯುದ್ಧವೊಂದರಲ್ಲಿ ಭಾಗವಹಿಸಿ ಪುಣೆಗೆ ಹಿಂದಿರುಗುತ್ತಿದ್ದ ಇಂದೋರಿನ ಸುಬೇದಾರ ಮಲ್ಲಾರಿರಾವ್ ಹೋಳ್ಕರ್ ದಾರಿಯ ಚೌಂದಿಯಲ್ಲಿ ಬೀಡುಬಿಟ್ಟಿದ್ದ. ಆ ದಿನ ಶಿವ ದೇವಸ್ಥಾನದಲ್ಲಿ ಪೂಜೆಯ ಸಮಯದಲ್ಲಿದ್ದ ಮಲ್ಲಾರಿ ರಾವ್ ಅಲ್ಲಿ ಪೂಜೆಯ ಸೇವೆಗೆ ಸಿದ್ಧಪಡಿಸುತ್ತಿದ್ದ ಅಹಲ್ಯೆಯನ್ನು ನೋಡಿದ. ಆಗ ಆಕೆಗೆ ಎಂಟುವರ್ಷ. ಅವಳ ಆರೋಗ್ಯಕರವಾದ ಶರೀರ ಗಂಭೀರ ನಡವಳಿಕೆಯನ್ನು ಕಂಡವನೇ ತನ್ನ ಮಗ ಖಂಡೇರಾಯನಿಗೆ ಅವಳನ್ನು ಮದುವೆಯಾಗಿ ತರಬೇಕೆಂದು ಕೊಂಡನು.

ಅಹಲ್ಯಾ ಬಾಯಿಯು ಅರಮನೆಗೆ ಬಂದ ನಂತರದ ಎಲ್ಲಾ ಯುದ್ಧಗಳಲ್ಲಿ ಮಲ್ಲಾರಿ ರಾಯನಿಗೆ ಗೆಲುವಾಯಿತು. ಹೋಳ್ಕರ್ ಅರಮನೆಗೆ ಐಶ್ವರ್ಯ ತುಂಬಿತು. ಅಹಲ್ಯಾಬಾಯಿಗೆ ಮಲೇರಾಯ ಮತ್ತು ಮುಕ್ತಾಬಾಯಿಯರು ಮಕ್ಕಳಾದರು. ರಾಜ್ಯಾಡಳಿತದಲ್ಲಿ ಮಗ ಖಂಡೆರಾಯನಿಗಿಂತ ಸೊಸೆ ಅಹಲ್ಯಾಬಾಯಿಗೆ ಇರುವ ಆಸಕ್ತಿಯನ್ನು ಮಲ್ಲಾರಿ ರಾಯನು ಗುರುತಿಸಿದನು. ಆದುದರಿಂದ ಯುದ್ಧರಂಗದಲ್ಲೂ ಆಕೆ ಭಾಗವಹಿಸುವಂತೆ ಪ್ರೇರೇಪಿಸಿದನು. ಕಂದಾಯ ವಸೂಲಿ, ಲೆಕ್ಕ ಪತ್ರಗಳ ವ್ಯವಸ್ಥೆ ಇವೆಲ್ಲವುಗಳಲ್ಲಿ ಆಕೆ ಪ್ರವೀಣಳಾದಳು.

1754ರಲ್ಲಿ ಕುಂಭೇರು ಕೋಟೆಯ ವಶಕ್ಕಾಗಿ ನಡೆದ ಯುದ್ಧದಲ್ಲಿ ಖಂಡೇರಾಯನು ಸಾವಿಗೀಡಾದನು. ಆಗಿನ ಪದ್ಧತಿಯಂತೆ ದುಃಖಿತಳಾದ ಅಹಲ್ಯಾ ಸಹಗಮನಕ್ಕೆ ಸಿದ್ಧಳಾದಳು.

ಆದರೆ ಮಲ್ಲಾರಿರಾಯನು ಚಿಕ್ಕಮಕ್ಕಳನ್ನೂ ಮುದುಕನಾದ ತನ್ನನ್ನೂ ಬಿಟ್ಟು ಹೋಗಬೇಡ ಎಂದು ಅಂಗಲಾಚಿ ಬೇಡಿಕೊಂಡುದರಿಂದ ಅಹಲ್ಯಾಬಾಯಿ ತನ್ನ ನಿರ್ಧಾರದಿಂದ ಹಿಂದೆ ಸರಿದಳು. ರಾಜ್ಯವನ್ನೂ ಪ್ರಜೆಗಳನ್ನೂ ಅನಾಥರಾಗಿಸದೆ ಲೋಕೋಪಕಾರಕ್ಕಾಗಿ ಬದುಕಬೇಕೆಂದು ನಿಶ್ಚಯಿಸಿದಳು.

ಆನಂತರ ಅಹಲ್ಯಾಬಾಯಿ ಆಭರಣಗಳನ್ನೂ ಬಿಚ್ಚಿಟ್ಟು ರಾಜವೈಭವವನ್ನು ಬಿಟ್ಟಳು. ಪೂಜೆ ಪ್ರಾರ್ಥನೆಗಾಗಿ ಸಮಯವನ್ನು ಮೀಸಲಿಟ್ಟಳು. ಪುರಾಣ ಶ್ರವಣ ದಾನಧರ್ಮಗಳಿಗೆ ಮನಸ್ಸು ಕೊಟ್ಟಳು. ಮಾಂಸಾಹಾರವನ್ನು ಬಿಟ್ಟಳು. ಇದೇ ಸಮಯದಲ್ಲಿ ಯುದ್ಧವೊಂದರಲ್ಲಿ ಭಾಗವಹಿಸಿ ಬರುತ್ತಿದ್ದ ಮಲ್ಲಾರಿ ರಾಯನು ಮರಣ ಹೊಂದಿದನು. ಆ ದುಃಖದೊಂದಿಗೆ ಆಡಳಿತದ ಸಂಪೂರ್ಣ ಭಾರವು ಅಹಲ್ಯಾ ಬಾಯಿಯ ಮೇಲೆ ಬಿದ್ದಿತು.

ಮಗನಾದ ಮಾಲೇರಾಯನ ಆಸಕ್ತಿಗಳು ತಾಯಿಯ ವಿಚಾರಗಳಿಗೆ ವಿರುದ್ಧವೇ ಆಗಿದ್ದವು. ಅವನು ಆಡಳಿತದಲ್ಲಿ ಸಹಾಯಕರಾಗಿದ್ದವರ ವಿರೋಧವನ್ನು ಕಟ್ಟಿಕೊಂಡನು. ಆಶ್ರಯಕ್ಕಾಗಿ ಬಂದವರನ್ನು ಅವಮಾನಿಸುತ್ತಿದ್ದನು. ಸುಭೇದಾರನಾಗಿ ಬಂದು ವರ್ಷದೊಳಗೆ ತೀವ್ರ ಅನಾರೋಗ್ಯದಿಂದ ಪ್ರಾಣ ಬಿಟ್ಟನು.

ಮಾವನೂ, ಗಂಡನೂ, ಮಗನೂ ಅಗಲಿದುದರಿಂದ ರಾಣಿಗೆ ರಾಜ್ಯಭಾರದಲ್ಲಿ ನೆರವಾಗುವವರಿಲ್ಲ ಎನ್ನುವ ಭಾವನೆಯು ಎಲ್ಲಾ ಕಡೆ ಹುಟ್ಟಿತ್ತು. ರಾಜ್ಯದ ಅಧಿಕಾರಿಗಳಲ್ಲಿ ಒಬ್ಬನಾದ ಯಶವಂತರಾಯನು ರಾಜ್ಯದ ಆಡಳಿತದ ಸೂತ್ರವನ್ನು ಹಿಡಿಯಲು ಇದೇ ಸಮಯವೆಂದುಕೊಂಡನು. ಪೇಶ್ವೆ ಮಾಧವರಾಯನ ತಮ್ಮ ರಘುನಾಥರಾಯನಿಗೆ ಇಂದೋರನ್ನು ವಶಪಡಿಸಿಕೊಳ್ಳಲು ನೆರವಾಗುವ ಭರವಸೆಯನ್ನು ಕೊಟ್ಟು ಆಹ್ವಾನಿಸಿದನು.

ಯುದ್ಧವು ಇನ್ನೇನು ಪ್ರಾರಂಭವಾಗಲಿದ್ದಿತು. ಅಹಲ್ಯಾಬಾಯಿಯು ಪಕ್ಕದ ಭೌನ್ಸ್ಲೆ ಮತ್ತು ಗಾಯಕವಾಡ ಸರದಾರರಿಗೆ ನೆರವಾಗಲು ಪತ್ರ ಬರೆದಳು. ಸೇನಾಪತಿ ತುಕಾಜಿಯ ನೇತೃತ್ವದಲ್ಲಿ ಸೈನ್ಯವನ್ನು ಸಿದ್ಧಗೊಳಿಸಿದಳು. ತಾನೂ ತನ್ನ ಮಹಿಳಾ ಪಡೆಯನ್ನು ಮುನ್ನಡೆಸಿದಳು. ಕ್ಷಿಪ್ರಾ ನದಿಯ ಎರಡು ದಡಗಳಲ್ಲಿ ಸೈನ್ಯಗಳು ಬೀಡುಬಿಟ್ಟವು. ಅಹಲ್ಯಾಬಾಯಿಯು ಯುದ್ಧಕ್ಕೆ ಮೊದಲು ಉಳಿದ ತಂತ್ರವನ್ನು ಪ್ರಯೋಗಿಸಬೇಕೆಂದು ಕೊಂಡಳು. ರಘುನಾಥರಾಯನಿಗೆ "ನಾನೊಬ್ಬಳು ಅಬಲೆ ಹೆಂಗಸು. ಯುದ್ಧಕ್ಕೆ ಸಿದ್ಧಳಾಗಿ ಬಂದಿರುವೆ. ಈ ಯುದ್ಧದಲ್ಲಿ ಗೆಲ್ಲಲೆಂದೇ ನಾನು ಬಂದಿದ್ದೇನೆ. ನಾನು ಅಕಸ್ಮಾತ್ತಾಗಿ ಸೋತರೂ ಒಬ್ಬ ಹೆಣ್ಣು ಹೆಂಗಸು ಸೋತಳು ಎಂದು ಕೊಳ್ಳುವರು. ಆದರೆ ನೀವೇನಾದರೂ ಸೋತರೆ ನಿಮ್ಮ ಸ್ಥಿತಿಯನ್ನು ಹೇಳುವಾಗ ಒಬ್ಬ ಅಬಲೆಯಿಂದ ಸೋತಿರಿ ಎಂದು ಹೇಳುತ್ತಾರೆ. ಯೋಚಿಸಿ ನೋಡಿ" ಎಂದು ಪತ್ರ ಬರೆದು ಕಳುಹಿಸಿದಳು. ರಘುನಾಥರಾಯನಿಗೆ ಅವಮಾನವಾದಂತಾಯಿತು. "ನಿಮ್ಮ ಮಗನ ಸಾವಿಗೆ ಸಂತಾಪಕೋರಲು ಬಂದಿದ್ದೆವು" ಎಂದು ಅವನು ಮರಳಿ ಹೋಗಿ ಮುಖ ವುಳಿಸಿಕೊಂಡನು.

ಪ್ರಜೆಗಳ ಸೌಕರ್ಯಕ್ಕಾಗಿ ಅಹಲ್ಯಾಬಾಯಿ ಹೋಳ್ಕರ್ ಸಂಸ್ಥಾನದ ಸಂಪತ್ತನ್ನು ವಿನಿಯೋಗಿಸುತ್ತಿದ್ದಳು. ಅನೇಕ ಯಾತ್ರಾ ಕ್ಷೇತ್ರಗಳಲ್ಲಿ ಛತ್ರಗಳನ್ನೂ ಸ್ನಾನಘಟ್ಟಗಳನ್ನೂ ಆಕೆ ಕಟ್ಟಿಸಿದಳು. ಸೋಮನಾಥ, ಗಯೆ, ಕಾಶಿಗಳಲ್ಲಿ ದೇವಾಲಯಗಳನ್ನು ಜೀರ್ಣೋದ್ಧಾರ ಗೊಳಿಸಿದಳು. ದನಕರುಗಳು, ಪಕ್ಷಿಗಳು, ಮೀನುಗಳೂ, ಇರುವೆಯೂ ಕೂಡಾ ಬದುಕಬೇಕೆಂದು ಹುಲ್ಲು ಮೇವು, ಕಾಳು ಕಡ್ಡಿ ಅಕ್ಕಿ, ಧಾನ್ಯಗಳನ್ನು ಮೀಸಲಿಡುವ ಪದ್ಧತಿಯನ್ನು ಆಕೆ ತಂದಳು.

ಮಕ್ಕಳಿಲ್ಲದ ವಿಧವೆಯರ ಆಸ್ತಿಯನ್ನು ರಾಜನು ವಶಪಡಿಸುವ ಸಂಪ್ರದಾಯವನ್ನು ಅಹಲ್ಯಾಬಾಯಿ ಹೋಳ್ಕರ್ ನಿಲ್ಲಿಸಿದಳು. ದೂರ ದೂರದ ಪ್ರದೇಶಗಳಲ್ಲಿ ಯಾತ್ರಿಕರನ್ನು ದೋಚುತ್ತಿದ್ದ ದರೋಡೆಕಾರರ ಹಾವಳಿಯನ್ನು ನಿಲ್ಲಿಸಿದಳು. 1787ರ ಸುಮಾರಿಗೆ ರಜಪೂತ ಸೈನ್ಯವು ಮರಾಠ ಸರದಾರರಾದ ಸಿಂಧೀಯಾ ಮತ್ತು ಗಾಯಕವಾಡರನ್ನು ಸೋಲಿಸಿತು. ಮುಂದೊತ್ತಿ ಹೋಳ್ಕರರನ್ನೂ ಸೋಲಿಸುವ ಹುಮ್ಮಸ್ಸಿನಲ್ಲಿ ಬಂದರು. ಆದರೆ ಅಹಲ್ಯಾ ಬಾಯಿಯ ಸೈನಿಕರು ರಾಮಪುರದಲ್ಲಿ ರಜಪೂತರನ್ನು ಸೋಲಿಸಿ ಸುಣ್ಣವಾಗಿಸಿದರು. ಈ ವಾರ್ತೆಯನ್ನು ಕೇಳಿದ ಸುತ್ತಲಿನ ಸಂಸ್ಥಾನದ ಜನರು ಆಶ್ಚರ್ಯಪಟ್ಟರು.

ಇದೇ ಸಮಯದಲ್ಲಿ ಮಗಳು ಮುಕ್ತಾಬಾಯಿಯ ಮಗ ನಾಥೂ ಕೂಡಾ ಕಾಯಿಲೆ ಬಿದ್ದು ಕೊನೆಯುಸಿರೆಳೆದನು. ಇದಾಗಿ ಎರಡು ವರ್ಷಗಳಲ್ಲಿ ಅಳಿಯ ಯಶವಂತರಾಯನೂ ದಿವಂಗತನಾದನು. ಮಗಳು ಮುಕ್ತಾಬಾಯಿಯು ಸಹಗಮನ ಮಾಡಿದಳು ಇವೆಲ್ಲವು ರಾಣಿಯನ್ನು ಹಣ್ಣು ಮಾಡಿದವು. ಪ್ರಜೆಗಳಿಗಾಗಿ ಬದುಕಿದ ರಾಣಿಯು ತನ್ನ ಜೀವನವನ್ನು ಮುಗಿಸುವ ನಿರ್ಧಾರವನ್ನು ಕೈಗೊಂಡಳು. ಹೀಗಿದ್ದಳು ನಮ್ಮ ಮಹಾರಾಣಿ ಅಹಲ್ಯಾಬಾಯಿ ಹೋಳ್ಕರ್.

## ಶ್ರೀ ವೆಂಕಟರಮಣಸ್ವಾಮಿ ಕೃಪಾಶ್ರಿತ ಯಕ್ಷಗಾನ ವಾರ್ಷಿಕೋತ್ಸವ



**ಕಾಸರಗೋಡು** : 1982ರಲ್ಲಿ ಸ್ಥಾಪನೆಗೊಂಡ ಶ್ರೀವೆಂಕಟ ರಮಣಸ್ವಾಮಿ ಕೃಪಾಶ್ರಿತ ಯಕ್ಷಗಾನ ಕಲಾ ಸಂಘ(ರಿ) ಕಾಸರಗೋಡು ನೇತೃತ್ವದಲ್ಲಿ ಪ್ರಾರಂಭಗೊಂಡ ಶ್ರೀವೆಂಕಟ ರಮಣ ಸ್ವಾಮಿ ಯಕ್ಷಗಾನ ಅಧ್ಯಯನ ಕೇಂದ್ರದ 2ನೇ ವಾರ್ಷಿಕೋತ್ಸವದ ಆಮಂತ್ರಣ ಪತ್ರಿಕೆ ಯನ್ನು ಬಿಡುಗಡೆಗೊಳಿಸಲಾಯಿತು. ಸಂಸ್ಥೆಯ ಸ್ಥಾಪಕ ಕೆ.ಎನ್. ವೆಂಕಟರಮಣ ಹೊಳ್ಳ, ತರಬೇತಿ ಕೇಂದ್ರ ಅಧ್ಯಕ್ಷ ಕೆ.ಎನ್. ರಾಮಕೃಷ್ಣ ಹೊಳ್ಳ, ಕೇಂದ್ರದ ನಾಟ್ಯಗುರು ರಾಕೇಶ್ ರೈ ಅಡ್ಕ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ವಿಶ್ವ ಹಿಂದು ವಾರ್ತಾ

## ಹಿಂದು ವಿಮೆನ್ ಫೋರಮ್‌ನಿಂದ ಕಾಲೇಜು ವಿದ್ಯಾರ್ಥಿನಿಯರಿಗೆ ಸ್ವರಕ್ಷಣೆಯ (Self Defence) ವರ್ಗಗಳು

**ಬೆಂಗಳೂರು :** ಮಹಾನಗರದ ಪ್ರತಿಷ್ಠಿತ ಎನ್.ಎಮ್.ಕೆ.ಆರ್.ವಿ. ಮಹಿಳಾ ಕಾಲೇಜಿನ ಪದವಿ ತರಗತಿಯ ಮೊದಲ ವರ್ಷದ ವಿದ್ಯಾರ್ಥಿನಿಯರಿಗೆ ಹಿಂದು ವಿಮೆನ್ ಫೋರಮ್; ಸ್ವರಕ್ಷಣೆಯ ತರಬೇತಿ ವರ್ಗಗಳನ್ನು ಪ್ರಾರಂಭಿಸಿತು.

ಶಸ್ತ್ರರಹಿತ ನಿಯುದ್ಧ, ದಂಡಯುದ್ಧ, ಯೋಗಗಳು ಸೇರಿದ ಶಿಕ್ಷಣ ಕ್ರಮದ ಉದ್ಘಾಟನೆಯು 9.9.2017ರಂದು ನಡೆಯಿತು. ಈ ಶಿಕ್ಷಣ ವರ್ಗದ ಕಾಲೇಜು ಸಂಯೋಜಕರಾದ ಡಾ। ಶ್ರೀಧರ ಮೂರ್ತಿಯವರು ತರಬೇತಿ ವರ್ಗದ ಕಲ್ಪನೆ, ಉದ್ದೇಶಗಳನ್ನು ವಿವರಿಸಿದರು. ಹಿಂದು ವಿಮೆನ್ ಫೋರಮ್ಮಿನಿಂದ ಸಂಯೋಜಕಿಯರಾದ ಶ್ರೀಮತಿ ವಸುಧಾ, ಶ್ರೀಮತಿ ಸೌಭಾಗ್ಯ, ಶ್ರಿಮತಿ ಉಮಾ ಶಿವಕುಮಾರ್‌ರವರನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿದರು.

ವೇದಿಕೆಯಲ್ಲಿ ಪದವಿ ಕಾಲೇಜಿನ ಉಪಪ್ರಾಂಶುಪಾಲರಾದ ಡಾ. ಎಸ್.ಎಂ. ಶ್ರೀಮತಿ, ಫೋರಮ್ಮಿನ ವಿಶ್ವಸ್ತರಾದ ಶ್ರೀಮತಿ ಬಿ.ಎಲ್. ರಮಾರತ್ನ, ಮಹಾನಗರ ದುರ್ಗಾವಾಹಿನಿ ಪ್ರಮುಖೆ ಹಿಂದು ವಿಮೆನ್ ಫೋರಮ್ಮಿನ ಸರಳವೇಣಿ ಮಾತೃಶಕ್ತಿ ಪ್ರಮುಖೆ ಶ್ರೀಮತಿ ಶುಭಾ ಉಪಸ್ಥಿತರಿದ್ದರು. ಕಾಲೇಜು ವಿದ್ಯಾರ್ಥಿಗಳು ಒಂದು ಗೀತೆಯನ್ನು ಹಾಡಿ ಕಾರ್ಯಕ್ರಮದ ಶುಭ ನಾಂದಿಯನ್ನು ಮಾಡಿದರು. ವೇದಿಕೆಯಲ್ಲಿದ್ದ ಹಿರಿಯರೆಲ್ಲರು ದೀಪ ಬೆಳಗಿಸಿ ವರ್ಗದ ಉದ್ಘಾಟನೆಯನ್ನು ಮಾಡಿದರು.

ಶಿಕ್ಷಕಿಯರಾಗಿ ಬಂದ, ದುರ್ಗಾವಾಹಿನಿಯ ಶಿಕ್ಷಾವರ್ಗಗಳಲ್ಲಿ ರೈಫಲ್, ದಂಡ, ಕರಾಟೆ, ಚೂರಿಕಾ ಪ್ರಯೋಗಗಳಲ್ಲಿ ಪ್ರಾವಿಣ್ಯತೆಯನ್ನು ಪಡೆದು ಸ್ವತಃ ಇಂಜಿನಿಯರಿಂಗ್ ಪದವಿಧರೆ ಲಾವಣ್ಯ ಹಾಗೂ ಎಂ.ಬಿ.ಎ. ಸ್ನಾತಕೋತ್ತರ ಪದವಿಪಡೆದ ಶ್ವೇತಾರವರ ಪರಿಚಯವನ್ನು ಶ್ರೀಮತಿ ರಮಾರತ್ನರವರು ಮಾಡಿದರು.

ತರಬೇತಿ ಯೋಜನೆಯ ವೈಶಿಷ್ಟ್ಯತೆಯನ್ನು ಕಾಲೇಜು ಉಪಪ್ರಾಂಶುಪಾಲೆಯರು ವಿವರಿಸಿ ಹಿಂದು ವಿಮೆನ್ ಫೋರಮ್ಮನ್ನು ಶ್ಲಾಘಿಸಿದರು. ಶ್ರೀಮತಿ ಬಿ.ಎಲ್.ರಮಾರತ್ನ ಫೋರಮ್ಮಿನ ಉದ್ದೇಶಗಳನ್ನು ಪರಿಚಯಿಸಿ ಹೆಣ್ಣುಮಕ್ಕಳಿಗೆ ಸ್ವಾವಲಂಬನೆಯ ಹಾದಿಯಲ್ಲಿ ಕೌಶಲ್ಯ ತರಬೇತಿಯ ಮೂಲಕ ಸಹಕರಿಸುವ ನಿಟ್ಟಿನಲ್ಲಿ ನಡೆದ ವಿವಿಧ ಪ್ರಯೋಗಗಳನ್ನು ವಿವರಿಸಿದರು. ಸ್ವರಕ್ಷಣೆಯ ತರಬೇತಿ ವರ್ಗದ ಮೂಲಕ ನಿರ್ಭಯವಾಗಿ ಬದುಕುವುದೂ ಅದಕ್ಕೆ ಪೂರಕವಾಗಿ ಬೌದ್ಧಿಕತೆಯನ್ನು ಬೆಳೆಸುವ ಅವಧಿಗಳೂ ಒಳಗೊಂಡಿರುವುದರಿಂದ ಪರಿಪೂರ್ಣ ವ್ಯಕ್ತಿತ್ವವನ್ನು ಹೊಂದಲು ವರ್ಗದ ಪಠ್ಯಕ್ರಮವು ಸಹಕಾರಿಯಾಗಲಿದೆ ಎಂದು ಆಶಿಸಿದರು. ಶ್ರೀಮತಿ ವಸು ಧಾರವರು ಹೆಣ್ಣುಮಕ್ಕಳ ದೈಹಿಕ ಬೆಳವಣಿಗೆ ಹಾಗೂ ಆರೋಗ್ಯ ವರ್ಧನೆಗೆ ಬೇಕಾದ ಆಹಾರ ಸೇವನೆಯ ಕೆಲವು ಸೂತ್ರಗಳನ್ನು ವಿವರಿಸಿದರು. **(ಭಾವಚಿತ್ರ ರಕ್ಷಾಪುಟ 3)**

# ‘ಹಸಿರು ಆಹಾರದಿಂದ ಆರೋಗ್ಯ’ – ಕಾರ್ಯಾಗಾರ

**ಶಿರಸಿ :** ಔಷಧಿಗುಣಗಳುಳ್ಳ ಸತ್ವಯುತವಾದ ಸಸ್ಯಗಳನ್ನು ಆಹಾರದಲ್ಲಿ ಉಪಯೋಗಿಸುವ ಕ್ರಮವನ್ನು ನಮ್ಮ ಹಿರಿಯರು, ಪೂರ್ವಜರು ನಮಗೆ ಕಲಿಸಿದ್ದಾರೆ. ನಮ್ಮ ಆಹಾರ ಪದ್ಧತಿಯಲ್ಲಿ ವೈಜ್ಞಾನಿಕ ಕ್ರಮವಿದೆ ಅಂಥಹ ಹಸಿರು ಆಹಾರದ ಮಹತ್ವವನ್ನು ನಾವು ತಿಳಿಯಬೇಕು ಎಂದು ಭೈರುಂಭೆ ಸರ್ಕಾರಿ ಆಯುರ್ವೇದ ಆಸ್ಪತ್ರೆಯ ಡಾ. ಜಗದೀಶ್ ಯಾಜಿ ಹೇಳಿದರು.

ತಾಲೂಕಿನ ಮೇಲಿನ ಓಣಿಕೇರಿಯಲ್ಲಿ ಗ್ರಾಮ ಅರಣ್ಯ ಸಮಿತಿ ಶಿಗೇಹಳ್ಳಿ, ತಟ್ಟಿಸರ ಸೇವಾಸಹಕಾರಿ ಸಂಘ ಮೇಲಿನ ಓಣಿಕೇರಿ, ಯೂಥ್ ಫಾರ್ ಸೇವಾ ಶಿರಸಿ, ಶ್ರೀ ದುರ್ಗಾ ನರ್ಸರಿ ಮತ್ತು ಸಮಗ್ರ ವಿಕಾಸ ಟ್ರಸ್ಟ್ ಶಿರಸಿ, ಸೇವಾ ಭಾರತಿ ಹುಬ್ಬಳ್ಳಿ ಇವುಗಳ ಸಂಯುಕ್ತಾಶ್ರಯದಲ್ಲಿ ಡಿಸೆಂಬರ್‌ದಲ್ಲಿ ಹುಬ್ಬಳ್ಳಿಯಲ್ಲಿ ನಡೆಯಲಿರುವ ’ಸೇವಾ ಸಂಗಮ’ದ ಕಾರ್ಯಕ್ರಮದ ನಿಮಿತ್ತ ’ಹಸಿರು ಆಹಾರ – ಹಸಿರು ಆರೋಗ್ಯ ಮತ್ತು ಮನೆಮದ್ದು ಕಾರ್ಯಾಗಾರ’ ಯೋಜಿತವಾಗಿತ್ತು. “ಆಯಾ ಋತುವಿನಲ್ಲಿ ಬರುವ ಹಬ್ಬಕ್ಕೆ ಆಗಾಗಲೇ ಮನುಷ್ಯರಿಗೆ ಆರೋಗ್ಯಕ್ಕೆ ಬೇಕಾದ ಪರಿಸರದಲ್ಲಿ ದೊರೆಯುವ ವಸ್ತುಗಳನ್ನು ಬಳಸಿಕೊಂಡು ಆಹಾರದಲ್ಲಿ ಉಪಯೋಗಿಸುವುದು ಒಂದು ವೈಜ್ಞಾನಿಕ ಕ್ರಮವಾಗಿದೆ. ನಮ್ಮ ಆಹಾರವೇ ನಮ್ಮ ಔಷಧವಾಗಿದ್ದು ಆ ಮೂಲಕ ಸದೃಢವಾದ ಶರೀರ, ಮನಸ್ಸು ಹೊಂದಬೇಕು” ಎಂದು ಡಾ. ಯಾಜಿ ಹೇಳಿದರು.

ಪಶ್ಚಿಮಘಟ್ಟದ ಪ್ರದೇಶದಲ್ಲಿ ಸಾವಿರಾರು ಜಾತೀಯ ವನಸ್ಪತಿಗಳಿದ್ದು ಅವುಗಳಲ್ಲಿ ಮಾರಕ ರೋಗಗಳಾದ ಮಧುಮೇಹ, ರಕ್ತದೊತ್ತಡ, ಕ್ಯಾನ್ಸರ್‌ಗಳನ್ನು ಗುಣಪಡಿಸುವ ಶಕ್ತಿಹೊಂದಿರುವ ಉತ್ತಮ ಔಷಧಿಯ ಸಸ್ಯಗಳಿವೆ. ಮಲೆನಾಡಿನ ಸಾಂಪ್ರದಾಯಿಕ ಆಹಾರ ಪದ್ಧತಿಯ ಜ್ಞಾನವನ್ನು ದಾಖಲಾತಿ ಮಾಡಿ ಉಳಿಸುವ ಪ್ರಯತ್ನ ಆಗಬೇಕಿದೆ ಎಂದು ಅತಿಥಿಗಳಾದ ಅರಣ್ಯ ಮಹಾವಿದ್ಯಾಲಯದ ಪ್ರಾಧ್ಯಾಪಕರು, ಯೂತ್ ಫಾರ್ ಸೇವಾದ ಶಿರಸಿ ಘಟಕದ ಸಲಹಾ ಮಂಡಳಿ ಸದಸ್ಯರು ಆದ ಶ್ರೀ ಆರ್. ವಾಸುದೇವ್ ಹೇಳಿದರು. **(ಭಾವಚಿತ್ರ ರಕ್ಷಾಪುಟ 2)**

ಕಾರ್ಯಾಗಾರದಲ್ಲಿ ಶಿರಸಿಯ ಆಯುರ್ವೇದಿಕ್ ವೈದ್ಯ ಡಾ. ರವಿಕಿರಣ್ ಪಟವರ್ಧನ್ ಅಡುಗೆ ಮನೆಯ ಔಷಧ ಭಂಡಾರ, ಡಾ. ಜಗದೀಶಯಾಜಿ ಹಸಿರು ಆಹಾರ ಆರೋಗ್ಯ ಕುರಿತು ಮತ್ತು ಗದಗದ ಹನುಮಂತಪ್ಪ ಮಳಲಿ ಕಾಯಿಲೆಗಳಿಗೆ ಮನೆಮದ್ದು ಪರಿಹಾರ ಎಂಬ ವಿಷಯದ ಮೇಲೆ ಮಾತನಾಡಿದರು.

ತಟ್ಟಿಸರ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಜಿ.ಟಿ. ಹೆಗಡೆ ಅಧ್ಯಕ್ಷತೆ ವಹಿಸಿದ್ದರು. ಓಣಿಕೇರಿ ಹಿ.ಪ್ರಾ. ಶಾಲೆಯ ವಿದ್ಯಾರ್ಥಿನಿಯರು ಪ್ರಾರ್ಥಿಸಿದರು, ಜಿಲ್ಲಾ ಸೇವಾ ಪ್ರಮುಖ ವಿನಾಯಕ ಕಾನಳ್ಳಿ ಸ್ವಾಗತಿಸಿ ಪ್ರಾಸ್ತಾವಿಕ ಮಾಡಿದರು. ಶೀಗೇಹಳ್ಳಿ ಗ್ರಾಮ ಅರಣ್ಯ ಸಮಿತಿಯ ಅಧ್ಯಕ್ಷ ವಿಶ್ವನಾಥ ಹೆಗಡೆ ಅತಿಥಿಗಳಿಗೆ ಸ್ಮರಣಿಕೆ ನೀಡಿ ಗೌರವಿಸಿದರು. ಯೂತ್ ಫಾರ್ ಸೇವಾದ ಉಮಾಪತಿ ಭಟ್ ವಂದಿಸಿದರು. ಗ್ರಾಂ.ಪಂ. ಸದಸ್ಯ ಜಿ.ವಿ. ಹೆಗಡೆ ನಿರೂಪಿಸಿದರು.

# ವಿಶ್ವ ಹಿಂದು ಪರಿಷದ್– ಕರ್ನಾಟಕ ದಕ್ಷಿಣ

## ಸತ್ಸಂಗ ಸಪ್ತಾಹ – ದಿನಾಂಕ: 01/10/2017 ರಿಂದ 08/10/2017 ವರೆಗೆ

ಅಖಿಲ ಭಾರತ ಯೋಜನೆಯಂತೆ, ನಮ್ಮ ಎಲ್ಲಾ ಸತ್ಸಂಗಗಳು ಸತ್ಸಂಗ ಸಪ್ತಾಹವನ್ನು ಆಚರಿಸಬೇಕು. ಈ ಅವಧಿಯಲ್ಲಿ ಸತ್ಸಂಗಗಳ ಪ್ರಮುಖರು ತಮ್ಮ ವ್ಯಾಪ್ತಿಯಲ್ಲಿನ ಎಲ್ಲಾ ಸ್ತರದ ಪದಾಧಿಕಾರಿಗಳು ತಮ್ಮ ಸತ್ಸಂಗಗಳಿಗೆ ಪ್ರವಾಸ ನೀಡುವಂತೆ ಯೋಜನೆಯನ್ನು ಮಾಡಬೇಕು. ಪ್ರಾಂತದಲ್ಲಿನ ಖಂಡಮಟ್ಟದಿಂದ ಕ್ಷೇತ್ರಮಟ್ಟದವರೆಗಿನ ಎಲ್ಲಾ ಪದಾಧಿಕಾರಿಗಳು ಈ ಅವಧಿಯಲ್ಲಿ ಸಾಧ್ಯವಾದಷ್ಟು ಸತ್ಸಂಗಗಳಿಗೆ ಪ್ರವಾಸವನ್ನು ಮಾಡಬೇಕು. ಆಯಾ ಜಿಲ್ಲಾ ಸತ್ಸಂಗ ಪ್ರಮುಖರು, ಅವರಿಲ್ಲದಿರುವ ಕಡೆ ಕಾರ್ಯದರ್ಶಿಗಳು ತಮ್ಮ ಜಿಲ್ಲೆಯಲ್ಲಿನ ಎಲ್ಲಾ ಸತ್ಸಂಗಗಳಿಗೆ ಪದಾಧಿಕಾರಿಗಳನ್ನು ಯೋಜನೆ ಮಾಡಬೇಕು. ಪದಾಧಿಕಾರಿಗಳು ಪ್ರವಾಸ ನೀಡುವ ಮುನ್ನ ತಮ್ಮ ಬರುವಿಕೆಯನ್ನು ಸತ್ಸಂಗ ಪ್ರಮುಖರಿಗೆ ಖಚಿತಪಡಿಸಬೇಕು. ಸತ್ಸಂಗಗಳು ಕ್ರಮಬದ್ಧವಾಗಿ ನಡೆಯುತ್ತಿವೆಯೇ ಎಂದು ಗಮನಿಸಬೇಕು.

ಸತ್ಸಂಗ ನಡೆಯುವ ಸ್ಥಳದಲ್ಲಿ ಭಾರತಮಾತಾ ಭಾವಚಿತ್ರವಿರಬೇಕು. ಮಂಗಳಕ್ಕೆ ಮುಂಚೆ ಭಾರತಮಾತಾ ಆರತಿಯನ್ನು ಎಲ್ಲರೂ ಸೇರಿ ಮಾಡಬೇಕು. ಸತ್ಸಂಗ ಟೋಳಿ ರಚಿಸುವಂತೆ ಸೂಚಿಸಬೇಕು. ಹಾಜರಾತಿ ಪುಸ್ತಕದಲ್ಲಿ ಹಾಜರಾತಿ ಮತ್ತು ಪ್ರವಾಸ ನೀಡಿದ ಅಧಿಕಾರಿಗಳ ವಿವರಗಳನ್ನು ನಮೂದಿಸಲಾಗುತ್ತಿದೆಯೇ ಎಂಬುದನ್ನು ಪರೀಕ್ಷಿಸಬೇಕು. ಸತ್ಸಂಗದ ನಂತರ ಪ್ರಮುಖರೊಂದಿಗೆ ಬೈಠಕ್ ಮಾಡಿ ಸಂಘಟನೆಯ ಕಾರ್ಯಗಳನ್ನು ಅವಲೋಕಿಸಬೇಕು. ಕೇಂದ್ರದಿಂದ ಬಂದಿರುವ ಹೊಸ ದೇಶಭಕ್ತಿಗೀತೆಯನ್ನು ಅಭ್ಯಾಸಮಾಡಿಸಬೇಕು. ಈ ಸಪ್ತಾಹದಲ್ಲಿ ಹಿರಿಯ ಪದಾಧಿಕಾರಿಗಳು ನಮ್ಮ ಸತ್ಸಂಗಗಳಿಗೆ ಬರುತ್ತಿರುವುದರಿಂದ ಹೆಚ್ಚು ಜನ ಸೇರುವಂತೆ ಪ್ರಯತ್ನಿಸಬೇಕು. ನಂತರದಲ್ಲಿ ಅವರೆಲ್ಲರೂ ಕ್ರಮಬದ್ಧವಾಗಿ ಸಾಪ್ತಾಹಿಕ ಸತ್ಸಂಗಗಳಿಗೆ ಬರುವಂತೆ ನೋಡಿಕೊಳ್ಳಬೇಕು. ಈ ಅವಧಿಯಲ್ಲಿ ಹೊಸ ಹೊಸ ಪ್ರದೇಶಗಳಲ್ಲಿ ಹೊಸ ಹೊಸ ಸತ್ಸಂಗಗಳನ್ನು ಆರಂಭಿಸುವುದಕ್ಕೆ ಇದು ಸಕಾಲ. ಎಲ್ಲಾ ಪದಾಧಿಕಾರಿಗಳು ಈ ಸಪ್ತಾಹದ ಅವಧಿಯಲ್ಲಿ ತಾವಿರುವ ಕಡೆ ಈ ಸತ್ಸಂಗಕಾರ್ಯದಲ್ಲಿ ಪೂರ್ಣವಾಗಿ ತೊಡಗಿಸಿಕೊಂಡು ಸತ್ಸಂಗಗಳನ್ನು ಕ್ರಮಬದ್ಧವಾಗಿ ನಡೆಸುವುದಕ್ಕೆ ಒತ್ತುಕೊಟ್ಟು ಸಹಕರಿಸಬೇಕು. ಸತ್ಸಂಗದ ನಂತರ ಯಾರಾದರೊಬ್ಬ ಸದಸ್ಯರ ಮನೆಗೆ ಭೇಟಿ ನೀಡಿ ಬರಬೇಕು. ತಮ್ಮ ಪ್ರವಾಸದ ವಿವರಗಳನ್ನು ಜಿಲ್ಲಾ/ಪ್ರಾಂತ ಸತ್ಸಂಗ ಪ್ರಮುಖರಿಗೆ ನೀಡಬೇಕು. ಅವರು ಅದನ್ನು ಕೇಂದ್ರಕ್ಕೆ ಕಳುಹಿಸುವರು.

ನಾವೆಲ್ಲಾ ಈ ಸತ್ಸಂಗ ಸಪ್ತಾಹವನ್ನು ನೆಪವಾಗಿಟ್ಟುಕೊಂಡು ಇರುವ ಸತ್ಸಂಗಗಳನ್ನು ಸಂಖ್ಯೆ ಮತ್ತು ಗುಣಮಟ್ಟದಿಂದ ಉತ್ತಮಗೊಳಿಸಿ, ಕ್ರಮಬದ್ಧಗೊಳಿಸೋಣ. ಹೊಸ ಸತ್ಸಂಗಗಳನ್ನು ಆರಂಭಿಸಿ ಸಂಘಟನೆಯ ಕಾರ್ಯವಿಸ್ತಾರವನ್ನು ಮಾಡೋಣ.

ಮಾಹಿತಿ: ಜಗನ್ನಾಥ ಶಾಸ್ತ್ರೀ, ಪ್ರಾಂತ ಸತ್ಸಂಗ ಪ್ರಮುಖರು: ದೂರವಾಣಿ 9986206527.

# ನೀವೆಷ್ಟು ಬುದ್ಧಿವಂತರು?

– ಬಿ. ಈ. ಸೀತಾಲಕ್ಷ್ಮೀ, ಬೆಂಗಳೂರು

1. ಪ್ರತಿವರ್ಷ ಡಿಸೆಂಬರ್ 22ರಂದು ಯಾರ ನೆನಪಿನಲ್ಲಿ ರಾಷ್ಟ್ರೀಯ ಗಣಿತ ದಿನವನ್ನು ಆಚರಿಸಲಾಗುತ್ತದೆ?
2. ವಂಶವಾಹಿನಿ ಶಾಸ್ತ್ರ (ಜೆನಿಟಿಕ್ಸ್)ದ ಪಿತಾಮಹ ಯಾರು?
3. ಪದ್ಮವಿಭೂಷಣ ಪ್ರಶಸ್ತಿಗೆ ಭಾಜನರಾದ ಕರ್ನಾಟಕದ ಹಿರಿಯ ವಿಜ್ಞಾನಿ ಯಾರು?
4. ಮಹಾಭಾರತದಲ್ಲಿ ವಸುಷೇಣ ಎಂಬ ಹೆಸರುಳ್ಳ ಪಾತ್ರ ಯಾವುದು?
5. ಗಂಗಾನದಿಯು ಸಾಗರದೊಡನೆ ಸೇರುವ ಗಂಗಾಸಾಗರ ಯಾವ ರಾಜ್ಯದಲ್ಲಿದೆ?
6. ಪದ್ಮಶ್ರೀ ಪ್ರಶಸ್ತಿ ಪಡೆದ ಕನ್ನಡ ನಿಘಂಟು ತಜ್ಞರು ಯಾರು?
7. ಹೊಸಗನ್ನಡ ಸಾಹಿತ್ಯದ ಪಿತಾಮಹ ಯಾರು?
8. ಯೋಗಗುರುವೆಂದು ಪ್ರಸಿದ್ಧರಾಗಿ ಸ್ವದೇಶಿ ವಸ್ತುಗಳ ತಯಾರಿಕೆ ಪ್ರಾರಂಭಿಸಿ ವಿದೇಶೀ ಕಂಪನಿಗಳಿಗೆ ಪೈಪೋಟಿ ನೀಡಿದವರು ಯಾರು?
9. ಭೂಮಿಯು ಸೂರ್ಯನಿಗೆ ಅತಿ ಸಮೀಪ ಬರುವ ದಿನ ಯಾವುದು?
10. ಕ್ರಿಕೆಟ್ ಮಾಂತ್ರಿಕ ಎಂದು ಯಾರನ್ನು ಕರೆಯಲಾಗುತ್ತದೆ?

**ಸರಿಉತ್ತರ** : 9–1 ಅತ್ಯುತ್ತಮ 7–8 ಉತ್ತಮ

**ಉತ್ತರಗಳು :**

**1. ಶ್ರೀನಿವಾಸ ರಾಮಾನುಜನ್ 2. ಜಾನ್ ಗ್ರಿಗೊರ್ ಮೆಂಡಲ್ 3. ಪ್ರೊ. ಯು.ಆರ್.ರಾವ್ 4. ಕರ್ಣ 5. ಪಶ್ಚಿಮ ಬಂಗಾಳ 6. ಜಿ. ವೆಂಕಟಸುಬ್ಬಯ್ಯ 7. ಬಿ.ಎಂ. ಶ್ರೀ ಕಂಠಯ್ಯ 8. ಬಾಬಾ ರಾಮ್‌ದೇವ್ 9. ಜನವರಿ 3 ರಂದು 10. ಡಾನ್‌ಬ್ರಾಡ್‌ಮನ್**

**ಪದಬಂಧ 127ರ ಉತ್ತರ**

| | | | | | | | | | |
|---|---|---|---|---|---|---|---|---|---|
| | | | ಪ | ರಿ | ಣ | ಯ | | | |
| | ನೀ | ರ | ವ | ■ | ■ | ಕೃ | ಷಿ | ಕ | |
| | ರ | ■ | ನ | ವ | ಬ | ತ್ತು | ■ | ರ | |
| ಅ | ಧಿ | ಕ | ■ | ■ | ■ | ■ | ಪಾ | ಟ | ಲ |
| ಸ | ■ | ವ | ■ | ■ | ■ | ■ | ವ | ■ | ಡಾ |
| ಲಿ | ಗಾ | ಡೆ | ■ | ■ | ■ | ■ | ಕ | ಲಾ | ಯಿ |
| | ವು | ■ | ಆ | ಜು | ಬಾ | ಜು | ■ | ವ | |
| | ದ | ರಿ | ದ್ರ | ■ | ■ | ಹ | ಮ್ಮಿ | ಣಿ | |
| | | | ರಿ | ತಾ | ರ | ಜ | | | |

# ಶಬ್ದಶೋಧ –128

ರಚನೆ : ಉಮಾ ಎಂ.ಎಸ್. ಬನಶಂಕರಿ, ಬೆಂಗಳೂರು




**ಎಡದಿಂದ ಬಲಕ್ಕೆ**

1. ಅರಳುವ ಹೂವು (3)
3. ಭೂಮಿಯ ಉತ್ತರ ಹಾಗೂ ದಕ್ಷಿಣಕ್ಕೆ ಸೂರ್ಯ ಚಲಿಸುವ ಮಾರ್ಗ (3)
5. ಹಕ್ಕಿಗಳ ಮಧುರವಾದ ಧ್ವನಿ (4)
6. ಸಿರಸಿಯ ದೇವತೆ (4)
8. ಹಿಮ, ಮಂಜು, ಇಬ್ಬನಿ (3)
9. ಮಸ್ತಿಷ್ಕವೆಂದರೂ ಇದೇ (3)
10. ಬ್ರಹ್ಮನ ಒಂದು ದಿನವನ್ನು ಊಹಿಸಬಹುದೇ? (3)
11. ದೀರ್ಘವಾಯಿತು ಜಗಳ (3)
13. ವಿಷ್ಣು ಚಕ್ರ (4)
15. ಕ್ಷೀರದಿಂದ ಮಾಡುವ ಸಿಹಿತಿಂಡಿ (4)
17. (ಒಲ್ಲದ) ಗಂಡನಿವನು (3)
18. ನೀರೂರುವ ನಾಲಿಗೆ (3)

**ಮೇಲಿನಿಂದ ಕೆಳಗೆ**

1. ಕಶ್ಮಲವಿಲ್ಲದ; ಕಾಗೆ ಬಂಗಾರವೂ ಹೌದು (3)
2. ಅಧಿಕಾರಿಗಳು ರುಜುಮಾಡಲು ಕೊಡುವ ಲಂಚ ಕೊನೆಯಲ್ಲಿ ಅಲ್ಪಪ್ರಾಣವಾಗಿದೆ. (4)

3. ಮಾನ ಉಳಿಸಿಕೊಳ್ಳಲು ಇಡುವ ಒತ್ತೆ (4)
4. ಹಿಂದು ಮುಂದಾದ ಚಿನ್ನ (3)
5. ಖಾರವಾದ ಸಂಭಾರ ಪದಾರ್ಥ (5)
7. ವಾಂಗೀಭಾತ್‌ಗೆ ಈ ತರಕಾರಿ ಬೇಕು (5)
11. ತಲೆಕೆಳಗಾದ ಇದು ನವರಸಗಳಲ್ಲಿ ಒಂದು (4)
12. ಹಸಿವು, ನೀರಡಿಕೆಯಾದಾಗ ಜನರ ಪ್ರಲಾಪ ಗೋಳಾಟ (4)
14. ವನದಲ್ಲಿರುವ ಸುಗಂಧ ಸಸ್ಯ (3)
16. ಮುತ್ತೈದೆಯರು ಬಾಗಿ ಕೊಡುವ ಮೊರದ ಜೊತೆ (3)

# ಗಾಂಧಿಮಹಾತ್ಮರ ಸ್ತೋತ್ರ

**ಸಂಗ್ರಹ : ಆರ್. ಸುಂದರಮ್ಮ ಸಮಾಜಸೇವಕಿ, ಬೆಂಗಳೂಡು**

ಜಯ ಜಯ ಸತ್ಯಾನ್ವೇಷಣಗಾಂಧಿ
ಜಯಜಯ ಸ್ವರಾಜ್ಯ ಸಾಧಕಗಾಂಧಿ ॥ಪ॥
ಭಾರತಮಾತೆಯ ಪುಣ್ಯಗರ್ಭದಲಿ
ಜನಿಸಿದೆ ದಿನಮಣಿ ಮಹಾತ್ಮಗಾಂಧಿ ॥ಅ॥ಪ॥



ವಸ್ತ್ರವತ್ಯಾಗ ಮಾಡಿದ ಗಾಂಧಿ
ಧರಿಸಿದ ಸ್ವತಂತ್ರ ಖಾದಿಯ ಗಾಂಧಿ
ಶತೃಗಳೊಳು ದಯೆ ತೋರಿದ ಗಾಂಧಿ
ಶತೃಗಳಿಲ್ಲದ ವೀರನು ಗಾಂಧಿ ॥1॥

ಚರಕವ ಗರಗರ ತಿರುಗಿಪ ಗಾಂಧಿ
ಸರ್ವಜನಸಂಪ್ರೀತನು ಗಾಂಧಿ
ಸತ್ಯದೈವವೆಂದು ನಂಬಿದ ಗಾಂಧಿ
ಸರ್ವರ ಹಿತೋಪವಾಸನು ಗಾಂಧಿ ॥2॥

ಕತ್ತಿಗಳಿಲ್ಲದೆ ರಕ್ತವ ಚೆಲ್ಲದೆ
ನಿಲಿಸಿದ ಸ್ವತಂತ್ರ ಧ್ವಜವನು ಗಾಂಧಿ
ಭಾರತ ದೇಶದ ಪ್ರೇಮಸ್ವರೂಪ
ಮಹಾಮಹಿಮನೀ ಮಹಾತ್ಮಗಾಂಧಿ ॥2॥

**(1940ರ ದಶಕದಲ್ಲಿ ಹಳ್ಳಿಗಳಲ್ಲಿ ಸಾಮೂಹಿಕವಾಗಿ ಹಾಡುತ್ತಿದ್ದ ದೇಶಭಕ್ತಿ ಗೀತೆ)**

# ಗಿಳಿಪಾಠ

**ಡಾ. ಸತ್ಯಧ್ಯಾನಾಚಾರ್ಯ ಕಟ್ಟಿ, ಬೆಂಗಳೂರು**




ನಮ್ಮ ನಾಣ್ಣುಡಿಯಲ್ಲಿ ಗಿಳಿಪಾಠ ಕೇಳಿರುತ್ತೇವೆ. ಗಿಳಿಪಾಠ ಎಂದರೇನು? ಹೇಳಿದಂತೆ ಮತ್ತೆ ಹೇಳುವುದು. ಆದರೆ ಅದು ಮಾತ್ರ ಪ್ರಯೋಜವಿಲ್ಲ. ಕೇಳಿದ್ದರ ಅರ್ಥವನ್ನು ತಿಳಿದು ಹೇಳಬೇಕು. ಅದರಂತೆ ನಡೆಯಬೇಕು ಎನ್ನುವುದು ತಿಳಿಯ ಬೇಕಾದ ನೀತಿ.

ಒಬ್ಬ ಸಂತನು ತನ್ನ ಆಶ್ರಮದಲ್ಲಿ ಒಂದು ಗಿಳಿಯನ್ನು ತಂದು ಪಂಜರದಲ್ಲಿ ಇಡುತ್ತಾನೆ. ಆಗ ಸಂತನ ಗುರುಗಳು ಸಂತನನ್ನು ಕುರಿತು, ಪಾರತಂತ್ರ್ಯ ಸಂಸಾರದ ದೊಡ್ಡ ಶಾಪ. ಈ ಗಿಳಿಯನ್ನು ಪಂಜರದಲ್ಲಿಟ್ಟು ಅಸ್ವತಂತ್ರನಾಗಿ ಮಾಡದೇ ಹೊರಗೆ ಹಾರಿ ಬಿಡು ಎಂದು ಹೇಳುತ್ತಾನೆ. ಸಂತನು ಹಾಗೆ ಮಾಡದೇ ಗಿಳಿಯನ್ನು ಪಂಜರದಲ್ಲಿ ಬಂಧಿಸಿ ಇಡುತ್ತಾನೆ. ಆದರೆ ಗುರುವನ್ನು ಮೆಚ್ಚಿಸಲಿಕ್ಕಾಗಿ ಆ ಗಿಳಿಯನ್ನು ಕುರಿತು, ಪಂಜರವನ್ನು ಬಿಟ್ಟು ಹಾರಿ ಹೋಗು! ಹಾರಿ ಹೋಗು! ಎಂದು ದಿನಾಲೂ ಹೇಳತೊಡಗುತ್ತಾನೆ. ಮೊದಲೇ ಹೇಳಿದ್ದನ್ನೇ ಹೇಳುವ ಗಿಳಿ ಆ ಮಾತನ್ನು ಕೇಳಿ ಕೇಳಿ ಚೆನ್ನಾಗಿ ಕಲಿತು ಹೇಳಲು ಪ್ರಾರಂಭಿಸುತ್ತದೆ.

ಒಂದು ದಿನ ಪಂಜರದ ಬಾಗಿಲು ತೆರೆದಿತ್ತು. ಗಿಳಿಯು ಹೊರಬಂದಿದ್ದರೂ ಹಾರಿ ಹೋಗಿರಲಿಲ್ಲ. ಸಂತನ ಗುರು ಅದನ್ನು ನೋಡಿದನು. ಅವನಿಗೆ ಆಶ್ಚರ್ಯವಾಯಿತು. ಅಷ್ಟೇ ಅಲ್ಲ ಗಿಳಿಯು, 'ಪಂಜರವನ್ನು ಬಿಟ್ಟು ಹಾರಿ ಹೋಗು ಹಾರಿ ಹೋಗು' ಎಂದು ಹೇಳುತ್ತಾ ಆರಾಮವಾಗಿ ತಿರುಗಾಡುತ್ತಿತ್ತು. ಅಂದರೆ ಅದು ಹೇಳಿದ್ದನ್ನು ಕಲಿತು ಪಾಠ ಒಪ್ಪಿಸಿತೇ ಹೊರತಾಗಿ ಆ ಪಾಠದ ಅರ್ಥವೇನು ಎಂದು ತಿಳಿದಿದ್ದರೆ ಎಂದೋ ಹಾರಿಹೋಗುತ್ತಿತ್ತು.

ಪ್ರಪಂಚದಲ್ಲಿ ಎಷ್ಟೋ ಜನರು ದೊಡ್ಡ ದೊಡ್ಡ ಮಾತುಗಳನ್ನು ಸುಲಭವಾಗಿ ಹೇಳುತ್ತಾರೆಯೇ ಹೊರತು ಅದರ ಅರ್ಥವೇನು, ಅಂತರಾರ್ಥವೇನು ಎಂದು ತಿಳಿದುಕೊಂಡಿರುವುದಿಲ್ಲ. ನಾವು ಓದುವ ಪಾಠ, ಪಾರಾಯಣ ಮಾಡುವ ಮಂತ್ರ–ಸ್ತೋತ್ರಗಳು ಕೇವಲ ಗಿಳಿಪಾಠವಾಗದೇ ಅವುಗಳ ಅರ್ಥ ಅಂತರಾರ್ಥಗಳನ್ನು ತಿಳಿದುಕೊಂಡಾಗ ನಮಗೆ ಸಂಸಾರವೆಂಬ ಪಂಜರದಿಂದ ಹೊರಗೆ ಹೋಗಲು ಸಾಧ್ಯ.

# ಶ್ರೀ ಶ್ರೀ ರಾಜರಾಜೇಶ್ವರಿ ದೇವಿಯ ಪೊಳಲಿ ಕ್ಷೇತ್ರ

ಬಿ.ಎಸ್. ಪಾರಿಜಾತ ಮೋಹನ್ ಬೆಂಗಳೂರು



ಮಾನವ ಜನ್ಮ ದೊಡ್ಡದು, ಭಗವಂತನು ಪ್ರತಿಯೊಂದು ಆತ್ಮಕ್ಕೆ ಅದರದೇ ಆದ ಶರೀರವನ್ನು ಸೃಷ್ಟಿಸಿ ಅದರ ಆಯಸ್ಸನ್ನು ನಿಯಮಿಸಿರುತ್ತಾನೆ. ದೇಹವು ನಶಿಸಿದಾಗ ಆತ್ಮಕ್ಕೆ ಮತ್ತೊಂದು ಹೊಸ ದೇಹವು ಸಿದ್ಧವಾಗಿರುತ್ತದೆ. ರಾಗದ್ವೇಷಗಳು, ಹುಟ್ಟು ಸಾವು ಕೇವಲ ದೇಹಕ್ಕೆ ಮಾತ್ರ ಆತ್ಮಕ್ಕಲ್ಲ. ಇದರ ಅರಿವಿಲ್ಲದೆ ನಾನು ನನ್ನದು ಎಂಬ ಮನದ ಜಂಜಾಟಕ್ಕೆ ಸಿಲುಕಿ ದೊರೆತ ಜನ್ಮದ ಅವಕಾಶವನ್ನು ಹಾಳು ಮಾಡಿಕೊಳ್ಳುತ್ತೇವೆ. ಅದಕ್ಕೇ ಅನುಭವಿಗಳು ಪಡೆದ ಜನ್ಮವನ್ನು ಉತ್ತಮ ಕಾರ್ಯಗಳಲ್ಲಿ ತೊಡಗಿಸಿ ಸಾರ್ಥಕ ಮಾಡಿಕೊಳ್ಳಿರಯ್ಯ ಎಂದು ಹೇಳಿರುವುದು.

ತನ್ನ ಆಸೆ ಆಕಾಂಕ್ಷೆಗಳ, ಅಪೇಕ್ಷೆಗಳ ಈಡೇರುವಿಕೆಗಾಗಿ ಕಾಣದ ಶಕ್ತಿಯನ್ನು ವಿವಿಧ ರೂಪದಲ್ಲಿ ಭಕ್ತಿಯಿಂದ ಪೂಜಿಸಿ ಬೇಡುವುದು ಮನುಷ್ಯ ಜೀವನದ ಸಹಜ ಸ್ವಭಾವ ಭಾಗ. ಸ್ತ್ರೀ ಶಕ್ತಿಯ ವಾತ್ಸಲ್ಯದಲ್ಲಿ ಅಪಾರ ನಂಬಿಕೆಯಿಟ್ಟು ಭಕ್ತನು ವಿವಿಧ ಸ್ತ್ರೀ ದೇವಿಯ ರೂಪವನ್ನು ಹಾಡಿಹೊಗಳಿ ಆರಾಧಿಸುತ್ತಾನೆ. ಅಂತಹ ಸ್ತ್ರೀ ಶಕ್ತಿಸ್ವರೂಪಳಾದ ತಾಯಿ ಭಗವತಿಯು ಶ್ರೀರಾಜರಾಜೇಶ್ವರಿಯಾಗಿ ಪೊಳಲಿಯಲ್ಲಿ ನೆಲೆ ನಂತು ಭಕ್ತರನ್ನು ಉದ್ಧರಿಸುತ್ತಿದ್ದಾಳೆ.

ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ, ಫಲ್ಗುಣಿ ನದಿಯ ದಡದಲ್ಲಿ ಪೊಳಲಿ ಶ್ರೀರಾಜರಾಜೇಶ್ವರಿ ದೇವಿಯ ದೇಗುಲವು ಶಕ್ತಿ ದೇವತೆಗಳ ಕ್ಷೇತ್ರಗಳಲ್ಲಿ ಪ್ರಮುಖವಾದದ್ದು. ಬೆಂಗಳೂರಿನಿಂದ ಇದು ಸುಮಾರು 350 ಕಿ.ಮೀ ದೂರದಲ್ಲಿದೆ.

**ಐತಿಹಾಸಿಕ ಹಿನ್ನೆಲೆ ;**

ಕ್ರಿ.ಶ. 8ನೇ ಶತಮಾನಕ್ಕೆ ಸೇರಿದೆನ್ನಲಾದ ಈ ದೇಗುಲವು ಅನೇಕ ರಾಜ ಮನೆತನಗಳ ಆಡಳಿತಕ್ಕೆ ಒಳಪಟ್ಟು ಅನೇಕ ರಾಜಮಹಾರಾಜರಿಂದ ದಾನದತ್ತಿಗಳನ್ನು ಅಭಿವೃದ್ಧಿ ಕಾರ್ಯಗಳನ್ನು ಪಡೆಯಿತು. ಹಿಂದೆ ರಾಜ ಸುರತ ಎಂಬುವನು ಈ ಕ್ಷೇತ್ರವನ್ನೊಳಗೊಂಡಂತೆ ತನ್ನ ಸಾಮ್ರಾಜ್ಯದ ರಕ್ಷಣೆಗಾಗಿ ಅನೇಕ ಯುದ್ಧಗಳನ್ನು ಕೈಗೊಂಡನು. ಆದರೆ ತನ್ನವರಿಂದಲೇ ಮೋಸಕ್ಕೊಳಗಾಗಿ ಅನೇಕ ಪ್ರದೇಶಗಳನ್ನು ಕಳೆದುಕೊಂಡು ಅದನ್ನು ಹಿಂಪಡೆಯಲು ಕೆಲವು ಔಷಧಿಯುಕ್ತ ಗಿಡಮೂಲಿಕೆ ಪದಾರ್ಥಗಳ ಮಿಶ್ರಣದ ವಿಶೇಷವಾದ ಮಣ್ಣಿನಿಂದ ತಾಯಿ ಶ್ರೀ ರಾಜರಾಜೇಶ್ವರಿಯ ವಿಗ್ರಹವನ್ನು ನಿರ್ಮಾಣ ಮಾಡಿಸಿದನು. ವಿಗ್ರಹವನ್ನು ಇಲ್ಲಿ ಪ್ರತಿಷ್ಠಾಪಿಸಿ

ಪೂಜೆ ಕೈಗೊಂಡನು. ಅಂದಿನಿಂದ ಈ ದೇವಿಯು ಇಲ್ಲಿ ನೆಲೆಸಿ ಭಕ್ತರನ್ನು ಸಲಹುತ್ತಿದ್ದಾಳೆ. ನಂತರದ ದಿನಗಳಲ್ಲಿ, ಕದಂಬ, ಚಾಲುಕ್ಯ, ಅಲೂಪ ರಾಷ್ಟ್ರಕೂಟ, ಹೊಯ್ಸಳ, ವಿಜಯನಗರ ಇಕ್ಕೇರಿ, ಮೈಸೂರು ಇತ್ಯಾದಿ ಅರಸರ ಆಡಳಿತಕ್ಕೆ ಒಳಪಟ್ಟು ಇಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳು ನಡೆದಿವೆ. ಅನೇಕ ದಾನದತ್ತಿಗಳು ದೇಗುಲಕ್ಕೆ ಸೇರಿವೆ. ಇಲ್ಲಿ ಕ್ರಿ.ಶ. 210–220 ರ ಕಾಲದ ಅಲೂಪ ಅರಸನು ತನ್ನ ಕಿರೀಟವನ್ನೇ ದೇವಿಗೆ ತೊಡಿಸಿ ಆಭರಣಗಳನ್ನು ಸಂಪತ್ತನ್ನು ದಾನ ನೀಡಿದನೆಂದು, ಅನೇಕ ಅಭಿವೃದ್ಧಿ ಕಾರ್ಯ ಕೈಗೊಂಡನೆಂದು ಹೇಳಲಾಗುತ್ತದೆ. ನಂತರ ಕೆಳದಿ ಚೆನ್ನಮ್ಮ ಈ ದೇಗುಲಕ್ಕೆ ಭೇಟಿ ನೀಡಿ ರಥವೊಂದನ್ನು ನೀಡಿದಳೆಂದು ತಿಳಿದು ಬರುತ್ತದೆ. ಭಾರತಕ್ಕೆ ಭೇಟಿ ನೀಡಿದ ವಿದೇಶಿ ಯಾತ್ರಿಕ ಅಬ್ದುಲ್ ರಜಾಕ್‌ನ ಬರವಣಿಗೆಯಲ್ಲೂ ಅಶೋಕನ ಶಾಸನಗಳಲ್ಲೂ ಈ ದೇಗುಲದ ಮಾಹಿತಿ ಇದೆ.

## ಪೌರಾಣಿಕ ಹಿನ್ನೆಲೆ ;

ಮಾರ್ಕಂಡೇಯ ಪುರಾಣದಲ್ಲೂ ಈ ಕ್ಷೇತ್ರದ ಬಗ್ಗೆ ಮಾಹಿತಿ ಇದೆ., ಹಿಂದೆ ಸುಮೇಧ ಎಂಬ ಋಷಿವರ್ಯರು ಇಲ್ಲಿ ನೆಲೆಸಿದ್ದರೆಂದು ಹೇಳಲಾಗುತ್ತದೆ. ಇಲ್ಲಿನ ಉತ್ತರದಿಕ್ಕಿನಲ್ಲಿ ಹರಿಯುವ ಫಲ್ಗುಣಿ ನದಿಯು ಈ ಕ್ಷೇತ್ರದಲ್ಲಿ ತನ್ನ ಮಾರ್ಗವನ್ನು ಅತಿ ಅವಸರದಲ್ಲಿ ಬದಲಿಸುತ್ತಾ ಹರಿಯುತ್ತಾಳೆ. ಹಿಂದೆ ಈ ಕ್ಷೇತ್ರವನ್ನು ಪುರಲ ಎಂದು ಕರೆಯಲಾಗುತ್ತಿತ್ತಂತೆ. ಮೊಗೆರಾ ಭಾಷೆಯ ಪುರಲ ಶಬ್ಧವು ತುಳು ಭಾಷೆಯಲ್ಲಿ ಕೊಳಲು ಎಂಬರ್ಥವನ್ನು ಹೊಂದಿದೆ. ನಂತರದ ದಿನಗಳಲ್ಲಿ 'ಪುರಲ', 'ಪುರೆಲ' 'ಪೊಳಲಿ' ಎಂದಾಗಿದೆ ಎನ್ನಲಾಗುತ್ತಿದೆ. ಇಲ್ಲಿನ ಈ ತಾಯಿಯನ್ನು 'ಪುರಲದೇವಿ' ಎಂದೂ ಕರೆಯಲಾಗುತ್ತಿತ್ತಂತೆ.

## ಶ್ರೀ ರಾಜರಾಜೇಶ್ವರಿ ದೇಗುಲ;



ಈ ದೇಗುಲವು 4 ಅಂಕಣಗಳಿಂದ ಕೂಡಿದ್ದು ತಾಮ್ರ ಹಾಗೂ ಸುಂದರ ಮರದ ಕೆತ್ತನೆಗಳಿಂದ ಅಲಂಕೃತವಾಗಿವೆ. ಮುಖಮಂಟಪವು ಸುಂದರವಾಗಿದ್ದು ಮೇಲ್ಛಾವಣಿ ಅನೇಕ ದೇವಾನು ದೇವತೆಗಳ ಚಿತ್ರಗಳಿಂದ ಕೂಡಿದೆ. ಧ್ವಜ ಸ್ಥಂಬವು ಆಕರ್ಷಕವಾಗಿದೆ. ಗರ್ಭ ಗೃಹದಲ್ಲಿ ನೂರಾರು ವರ್ಷಗಳ ಹಿಂದೆ ವಿವಿಧ ಗಿಡಮೂಲಿಕೆಗಳು ಮತ್ತು ವಿಶೇಷ ಮಣ್ಣಿನಿಂದ ನಿರ್ಮಿತವಾದ ತಾಯಿಯ ವಿಗ್ರಹವು ಇಂದಿಗೂ ತನ್ನ ಮಹತ್ವವನ್ನು ಹೊಂದಿದೆ. ಸುಮಾರು 8–10 ಅಡಿ ಎತ್ತರದ ದೇವಿಯ ವಿಗ್ರಹವು ಕೆಂಪಾದ ಕಂಗಳಿಂದ ನಯನ



ಮನೋಹರವಾಗಿದೆ. 12 ವರ್ಷಗಳಿಗೊಮ್ಮೆ ವಿಗ್ರಹಕ್ಕೆ ವಿಶೇಷ ಮಣ್ಣಿನ ಲೇಪನವನ್ನು ಮಾಡಲಾಗುತ್ತದೆ. ಇದನ್ನು ಲೇಪಾಷ್ಟ ಗಂಧ ಎನ್ನಲಾಗುತ್ತದೆ. ಮೂಲ ವಿಗ್ರಹವು ನೂರಾರು ವರ್ಷಗಳ ಹಿಂದೆ ವಿಶೇಷ ಪದಾರ್ಥಗಳಿಂದ ತಯಾರಿಸಿದ್ದಾಗಿದೆ.

**ಚೆಂಡು ಉತ್ಸವ :**

ಇಲ್ಲಿ ವರ್ಷವೂ ಮಾರ್ಚ್ ತಿಂಗಳಿನಲ್ಲಿ ಜಾತ್ರಾ ಮಹೋತ್ಸವ ನಡೆಯುತ್ತದೆ. ಚೆಂಡಿನ ಉತ್ಸವ ಚೆಂಡಿನಾಟ (ಘುಟ್ಬಾಲ್) ಇಲ್ಲಿನ ವಿಶೇಷತೆ. ಚಮ್ಮಾರರಿಂದ ಚರ್ಮದ ಚೆಂಡೊಂದನ್ನು ತಯಾರಿಸಿ ಹೂಗಳಿಂದ ಅಲಂಕರಿಸಿ ಅದನ್ನು ದೇಗುಲದ ಗೋಪುರದ ಮೇಲೆ ತಾಳೆಗರಿಗಳಿಂದ ಅಲಂಕರಿಸಿ ಪೂಜಿಸಲಾಗುತ್ತದೆ. ನಂತರ ಭಕ್ತರಿಂದ ಚೆಂಡಿನ ಕ್ರೀಡೆ ನಡೆಸಲಾಗುತ್ತದೆ. 5 ದಿನಗಳ ಈ ಉತ್ಸವ ವಿಶೇಷ. ದುಷ್ಟಶಕ್ತಿಯ ನಿಗ್ರಹ ಶಿಷ್ಯ ರಕ್ಷಣ ಈ ಕ್ರೀಡೆಯ ಕುರೂಹಾಗಿದೆ ಎನ್ನಲಾಗುತ್ತದೆ.

**ಇಲ್ಲಿನ ಇತರೆ ದೇಗುಲಗಳು ;**

ಇಲ್ಲಿ ಶ್ರೀ ಸುಬ್ರಹ್ಮಣ್ಯ ದೇಗುಲ, ಭದ್ರಕಾಳಿ, ಮಹಾಗಣಪತಿ, ಸರಸ್ವತಿಯ ದೇಗುಲಗಳು ಭಕ್ತರನ್ನು ಆಕರ್ಷಿಸುತ್ತವೆ.

**ಇಲ್ಲಿನ ವಿಶೇಷತೆಗಳು : ಯಾತ್ರಿಕರಿಗೆ ಹೆಚ್ಚಿನ ಮಾಹಿತಿ ;**

* ಜಾತ್ರೆಯ ಸಮಯದಲ್ಲಿ ಸಿಂಹಾಸನ ಕಟ್ಟೆ ನಿರ್ಮಾಣವಾಗಿ ಪ್ರಭಾವತಿ ರಥ ಯಾತ್ರೆ ಜರುಗುತ್ತದೆ.
* ಬೆಂಗಳೂರಿನಿಂದ 350 ಕಿ.ಮೀ. ದೂರದಲ್ಲಿದೆ. ಮಂಗಳೂರಿನಂದ 19 ಕಿ.ಮೀ. ದೂರದಲ್ಲಿದೆ.
* ಈ ದೇಗುಲವು ಪ್ರತಿದಿನ ಬೆಳಿಗ್ಗೆ 8.30 ರಿಂದ ಸಂಜೆ 8.30ವರೆಗೆ ತೆರೆದಿರುತ್ತದೆ.
* ಸಿಂಹಸಂಕ್ರಮಣ, ಸೌರಯುಗಾದಿ, ಗೋಕುಲಾಷ್ಟಮಿ, ಭಾದ್ರಪದಶುಕ್ಲ ಪಕ್ಷ 4ನೇ ದಿನ, ಕದಿರು ಹಬ್ಬ, ನವರಾತ್ರಿ, ಕಾರ್ತಿಕ ಮಾಸ, ಸುಬ್ರಹ್ಮಣ್ಯ ಪಂಚಮಿ, ಧನುರ್ಮಾಸ, ಶಿವರಾತ್ರಿ ಇತ್ಯಾದಿ ದಿನಗಳಲ್ಲಿ ವಿಶೇಷ ಪೂಜೆ ಅಲಂಕಾರ ದೀಪೋತ್ಸವ ಜರುಗುತ್ತದೆ.
* ಇಲ್ಲಿಗೆ ಮಂಗಳೂರು, ಕದ್ರಿ, ಕಟಿಲು, ಉಡುಪಿ, ಧರ್ಮಸ್ಥಳ, ಕುಕ್ಕೆಸುಬ್ರಹ್ಮಣ್ಯ ಇತ್ಯಾದಿ ಹತ್ತಿರದ ಯಾತ್ರಾ ಸ್ಥಳಗಳು.

**(ಲೇಖಕಿಗೆ ನಡೆದ ಸನ್ಮಾನ ಕಾರ್ಯಕ್ರಮದ ಭಾವಚಿತ್ರ ರಕ್ಷಾಪುಟ 2 ರಲ್ಲಿದೆ.)**

# ಕಾವೇರಿಗೆ ಪುಷ್ಕರ

**ಶಾರದಾ ವಿ. ಮೂರ್ತಿ,**
**ಮೈಕೊ ಬಡಾವಣೆ, ಬೆಂಗಳೂರು**



ದಕ್ಷಿಣದ ಭಾಗೀರಥಿ ಕಾವೇರಿಯ ಪುಷ್ಕರದ ವಿಷಯವೇ ಎಲ್ಲೆಲ್ಲೂ ಕೇಳಿ ಬರುತ್ತಿತ್ತು. ಪತ್ರಿಕೆಗಳಲ್ಲೂ ಆ ಕುರಿತಾಗಿಯೇ ವಿಷಯಗಳು, ಫೋಟೋಗಳು, ವರದಿ ... ನಾವು ಒಮ್ಮೆ ಹೋಗಿ ಪುಣ್ಯನದಿಯಲ್ಲಿ ಮಿಂದು, ನವಚೈತನ್ಯವನ್ನು ಪಡೆಯಬಾರದೇಕೆ ಎಂಬ ವಿಚಾರ ಪದೇ ಪದೇ ಮನದಲ್ಲಿ ಬರತೊಡಗಿತ್ತು. ಜೊತೆ ಜೊತೆಗೆ ಅಲ್ಲಿರಬಹುದಾದ ಜನದಟ್ಟಣೆ, ನೂಕುನುಗ್ಗಲು, ಕಸದ ರಾಶಿ, ಸ್ನಾನಕ್ಕೆ ಒದಗಬಹುದಾದ ಅಡಚಣೆಗಳು, ನದಿಯ ತಟದಲ್ಲಿ ಸ್ಥಳ ಸಿಗುವ ಬಗ್ಗೆ ಅನುಮಾನ, ಬಟ್ಟೆ ಬದಲಾಯಿಸುವ ಸಮಸ್ಯೆ ಹಾಗೂ ಪ್ರಯಾಣದ ಆಯಾಸದ ಬಗ್ಗೆ ಯೋಚಿಸುವಾಗ ಹಿಂಜರಿಕೆ, ಹೀಗೆ ಯೋಚಿಸುತ್ತಿದ್ದರೆ ಎಲ್ಲವೂ ಕಷ್ಟವೇ! ಹರಿದ್ವಾರ, ಪ್ರಯಾಗ, ನಾಸಿಕ ಅಂತಹ ಕ್ಷೇತ್ರಗಳಲ್ಲಿ, ಕುಂಭಮೇಳದ ಕಾಲದಲ್ಲಿ ಲಕ್ಷಾಂತರ ಜನರು ಸೇರುತ್ತಾರಲ್ಲ... ಅವರೆಲ್ಲರೂ ಸ್ನಾನ, ಅರ್ಘ್ಯ, ತರ್ಪಣಾದಿಗಳನ್ನು ಹೇಗೆ ಮಾಡುತ್ತಾರೆ? ಅವರ ಊಟ–ವಸತಿಯ ಬಗ್ಗೆ ಕಲ್ಪನೆಯೂ ನಮಗೆ ಕಷ್ಟವೇ! ನಾಲ್ಕಾರು ಮೈಲಿಗಳ ದೂರ ವಾಹನಗಳನ್ನು ನಿಲ್ಲಿಸಿರುತ್ತಾರೆ. ಆದರೂ ಹೋಗಲೇಬೇಕೆಂಬ ಅವರ ನಿರ್ಧಾರ, ಶ್ರದ್ಧೆ ಅಚಲವಾಗಿರುತ್ತದೆ. ಹಾಗೆಯೇ ದೃಢ ಚಿತ್ತವಿದ್ದರೆ ಮತ್ತೆಲ್ಲವೂ ಗೌಣವಾದೀತು! ಕಾವೇರಿಯ

ತೀರದಲ್ಲಿ ಉತ್ತರ ಭಾರತದಷ್ಟು ಜನಸಂದಣಿಯಂತೂ ಇರಲಾರದು ಎಂಬ ಯೋಚನೆ ಗಟ್ಟಿಯಾಗಿ ಪುಷ್ಕರದಲ್ಲಿ ಭಾಗಿಯಾಗಲು ಸಿದ್ಧರಾದೆವು. ರೈಲಿನಲ್ಲಿ ಶ್ರೀರಂಗಪಟ್ಟಣಕ್ಕೆ ಪ್ರಯಾಣಿಸುವಾಗ ಮೈಮನಗಳಲ್ಲೆಲ್ಲಾ ಕಾವೇರಿಯೇ ಆವರಿಸಿಕೊಂಡಿದ್ದಳು. ತಲಕಾವೇರಿ, ಭಾಗಮಂಡಲ, ಕನ್ನಂಬಾಡಿ, ರಂಗನತಿಟ್ಟು, ಶ್ರೀರಂಗಪಟ್ಟಣ, ಶಿವನ ಸಮುದ್ರ, ಮೇಕೆದಾಟು ಮುಂದೆ ತಮಿಳುನಾಡು ಹೀಗೆ ಮುಂದೆ ಸಾಗುತ್ತಾ ಬಂಗಾಳಕೊಲ್ಲಿಯನ್ನು ಸೇರುವ ಕಾವೇರಿ ನಮ್ಮೆಲ್ಲರ ಜೀವದಾತೆ. ನಮ್ಮೆಲ್ಲರ ಮನೆಮನೆಗಳಲ್ಲಿ ಜೀವಜಲ ಒದಗಿಸುವವಳು ಅವಳೇ! ಬ್ರಹ್ಮಗಿರಿಯ ತಪ್ಪಲಿನ ಕೊಡಗಿನ ತಲಕಾವೇರಿಯಲ್ಲಿ ಹುಟ್ಟಿ, ಮುಂದೆ ತಾನು ಸಾಗಿದಲ್ಲೆಲ್ಲಾ ಪೈರು-ಪಚ್ಚೆಯನ್ನು ಸಂವೃದ್ಧಿಗೊಳಿಸುತ್ತಾಳೆ. ವಿದ್ಯುತ್ ಶಕ್ತಿಯ ಮೂಲಕ ಎಲ್ಲರಿಗೂ ಬೆಳಕಾಗುತ್ತಾಳೆ. ಪ್ರಕೃತಿಗೆ ಹಸಿರುಡುಗೆ ತೊಡಿಸಿ ಮನಕ್ಕೆ ಮುದ ನೀಡುತ್ತಾಳೆ. ಅವಳಿಲ್ಲದೆ ಬಾಳೆಲ್ಲಿ?

ಕಾವೇರಿಯ ಪೌರಾಣಿಕ ಹಿನ್ನೆಲೆಯೂ ಅತಿ ರೋಚಕವಾದದ್ದು. ಕವೇರ ಮುನಿಯ ತಪಸ್ಸಿಗೆ ಮೆಚ್ಚಿದ ಬ್ರಹ್ಮ ಆತನಿಗೆ ತನ್ನ ಮಗಳನ್ನೇ ಸಾಕುಮಗಳಾಗಿ ದಯಪಾಲಿಸುತ್ತಾನೆ. ಹೀಗೆ ಲೋಪಾಮುದ್ರೆ ಕಾವೇರಿಯಾಗಿ ತಂದೆಯ ಜಪ-ತಪಗಳಿಗೆ ಪೂರ್ಣ ಸಹಕಾರ ನೀಡುತ್ತಾ ತಾನೂ ಆಧ್ಯಾತ್ಮದತ್ತಲೇ ಒಲಿಯುತ್ತಾಳೆ. ಸಕಲ ಜೀವಿಗಳಿಗೂ ಉಪಕಾರಿಯಾಗುವ ಮಹದಾಶೆ ಆಕೆಗೆ. ಅಗಸ್ತ್ಯ ಋಷಿಗಳ ಕೋರಿಕೆಯನ್ನು ಮನ್ನಿಸಿ, ಅವರನ್ನು ವಿವಾಹವಾದರೂ ಕಾವೇರಿಗೆ ಲೋಕಹಿತದ್ದೇ ಚಿಂತೆ. ಪತಿ ಅಗಲಿದಂದು ನದಿಯಾಗಿ ಹರಿಯುವ ನಿಬಂಧನೆ ವಿಧಿಸಿರುತ್ತಾಳೆ. ಒಮ್ಮೆ ಅಗಸ್ತ್ಯರು ತತ್ತ್ವಚಿಂತನೆಗೆಂದು ಹೋದವರು, ಬರುವುದು ತಡವಾದಾಗ ನದಿಯಾಗಿ ಹರಿಯತೊಡಗುತ್ತಾಳೆ. ಹೀಗೆ ಆಕೆ ತಾನು ಹರಿಯುವ ಪ್ರದೇಶಗಳನ್ನೆಲ್ಲಾ ಆಧ್ಯಾತ್ಮಿಕ, ಸಾಂಸ್ಕೃತಿಕ, ಕೃಷಿಯ ನೆಲೆವೀಡನ್ನಾಗಿ ಮಾಡಿದ್ದಾಳೆ. ಪ್ರಾಕೃತಿಕ ಸೊಬಗಿನಿಂದ ಕಣ್ತಣಿಸುತ್ತಾಳೆ. ಇಂತಹ ಲೋಕಪಾವನಿಯ ಸನ್ನಿಧಿಯಲ್ಲಿ ಶ್ರೀರಂಗನಾಥನಿಗೆ ಶೇಷಶಾಯಿಯಾಗಿ ಪವಡಿಸುವ ಆನಂದ. ಅದಕ್ಕಾಗಿ ಆದಿರಂಗ, ಮಧ್ಯರಂಗ, ಅಂತ್ಯರಂಗ ಹೀಗೆ ಶ್ರೀರಂಗನ ಭವ್ಯಕ್ಷೇತ್ರಗಳಿಗೆ ಕಾವೇರಿ ಸಾಕ್ಷಿಯಾಗಿದ್ದಾಳೆ.

ತುಲಾ ಸಂಕ್ರಮಣ ಕಾವೇರಿಯಲ್ಲಿ ತೀರ್ಥೋದ್ಭವವಾಗುವ ಶುಭದಿನ. ಆಗ ಗಂಗೆಯೂ ಬಂದು, ತನಗೆ ಭಕ್ತರ ಪಾಪದಿಂದಾದ ಮಲಿನತೆಯನ್ನು ಹೋಗಲಾಡಿಸಿಕೊಳ್ಳಲು ಇಲ್ಲಿ ಮಿಂದು ಪಾವನಳಾಗುತ್ತಾಳೆ. ಅಂದು ಭಾರತದ ಎಲ್ಲಾ ಕಡೆಗಳಿಂದಲೂ ಭಕ್ತರು ಇಲ್ಲಿಗೆ ಬಂದು ಮಿಂದು ಕೃತಾರ್ಥರಾಗುತ್ತಾರೆ.

ರೈಲಿನಲ್ಲಿ ಕುಳಿತ ಅನೇಕ ಸಹಪ್ರಯಾಣಿಕರೂ ಸಹ ಪುಷ್ಕರದ ವಿಷಯವನ್ನೇ ಚರ್ಚಿಸುತ್ತಿದ್ದರು. ಗುರುವು ತುಲಾರಾಶಿಯನ್ನು ಪ್ರವೇಶಿಸುವುದರಿಂದ ಹನ್ನೆರಡು ವರ್ಷಗಳಿಗೊಮ್ಮೆ ಕಾವೇರಿಯಲ್ಲಿ ಮಹಾಪುಷ್ಕರದ ಸಂಭ್ರಮ. ಆದರೆ ಈ ಬಾರಿಯ ಪುಷ್ಕರಕ್ಕೆ ಮತ್ತೂ ವಿಶೇಷವಿದೆ. 177

ವರ್ಷಗಳ ಹಿಂದೆ, ಅಂದರೆ 1840 ಸೆಪ್ಟೆಂಬರ್ 8ರಂದು ಇದ್ದಂತೆಯೇ ಈಗಲೂ ಗ್ರಹ, ನಕ್ಷತ್ರ, ರಾಶಿಗಳ ಹೊಂದಾಣಿಕೆ ಏರ್ಪಟ್ಟಿದೆ. ಆದ್ದರಿಂದ ಈ ಪುಷ್ಕರ ಅತಿ ಮಹತ್ತ್ವದ್ದು. ತ್ರಿಮೂರ್ತಿಗಳ ಸಾನ್ನಿಧ್ಯವಿದ್ದು ಗಂಗಾ, ಯಮುನೆಯರೂ ಇಲ್ಲಿ ಮಿಂದು, ತಮ್ಮ ಭಕ್ತಾದಿಗಳ ಪಾಪದ ಮಲಿನತೆಯನ್ನು ತೊಡೆದು ಪುನೀತರಾಗುತ್ತಾರೆಂದ ಮೇಲೆ, ನಮ್ಮ ಕಾವೇರಿಯ ಶ್ರೇಷ್ಠತೆಯ ಬಗ್ಗೆ ಮತ್ತಷ್ಟು ಹೆಮ್ಮೆಯುಂಟಾಗುತ್ತದೆ. ಇಂತಹ ವಿಶೇಷ ಹಾಗೂ ಅಪರೂಪದ ಸಂದರ್ಭಗಳಲ್ಲಿ ನಾವೂ ಭಾಗಿಗಳಾದರೆ ಆ ನೆನಪು ಹಚ್ಚಹಸಿರಾಗಿ ಎಂದೂ ಮನದಂಗಳದಲ್ಲಿ ಉಳಿಯಬಲ್ಲುದು.

ಈ ಸಂದರ್ಭದಲ್ಲಿ ಉತ್ತರ ಭಾರತದಲ್ಲಿ ಅನೇಕರು ಮಾಡುವ ಗಂಗಾ ಕಾವಡಿಯ ನೆನಪಾಗುತ್ತದೆ. ಪ್ರತೀ ಶ್ರಾವಣದಲ್ಲೂ ಗಂಗಾ ಸನ್ನಿಧಿಗೆ ಕಾಲ್ನಡಿಗೆಯಲ್ಲೇ ಗುಂಪುಗುಂಪಾಗಿ ಹೋಗಿ ಆಕೆಯನ್ನು ಪೂಜಿಸಿ, ಅಲ್ಲಿ ಸಿಕ್ಕುವ ಅನೇಕ ತೀರ್ಥಕ್ಷೇತ್ರಗಳನ್ನು ದರ್ಶಿಸಿ, ಗಂಗೆಯನ್ನು ತೆಗೆದುಕೊಂಡು ತಮ್ಮೂರಿಗೆ ಬರುತ್ತಾರೆ. ಅಲ್ಲಿಯ ದೇವಾಲಯದಲ್ಲಿ ಗಂಗೆಗೆ ಮತ್ತೆ ಪೂಜೆ. ನಂತರ ಮನೆಗೆ ತೆಗೆದುಕೊಂಡು ಹೋಗಿ ಗಂಗೆಯಿಂದ ಶಿವನಿಗೆ ಅಭಿಷೇಕ, ಮಹಿಳೆಯರು, ಎಂಟು–ಹತ್ತು ವಯಸ್ಸಿನ ಬಾಲಕ ಬಾಲಕಿಯರೂ ಈ ಕಾವಡಿಯಲ್ಲಿ ಭಾಗವಹಿಸುವುದುಂಟು. ಎಷ್ಟೆಷ್ಟೋ ಮೈಲಿ ನಡೆದುಹೋಗುವಾಗ, ನಡುವೆ ಎಲ್ಲೆಲ್ಲೋ ತಂಗಿದ್ದು, ನಸುಕಿನಲ್ಲಿಯೇ ನಡಿಗೆ ಪ್ರಾರಂಭಿಸುತ್ತಾರೆ. ಈ ಯಾತ್ರೆ ಒಂದೆರಡು ವಾರಗಳವರೆಗೆ ಮುಂದುವರಿಯುವುದೂ ಉಂಟು. ಕೆಲವರು ಸಾರೋಟಿನಂತೆ ರಥದಲ್ಲಿ, ಕೇಸರಿಯ ಧ್ವಜ ಹಾಕಿ, ಶಿವನ ಹಾಗೂ ಗಂಗೆಯ ಚಿತ್ರಗಳನ್ನಿಟ್ಟು, ಉದ್ದಕ್ಕೂ ಭಜನೆ ಮಾಡುತ್ತಾ ಗಂಗೆ ತರಲು ಹೋಗುತ್ತಾರೆ. ತಂದ ಗಂಗೆಯ ಕಳಸವನ್ನು ನೆಲಕ್ಕೆ ತಗುಲದಂತೆ ನೋಡಿಕೊಳ್ಳುತ್ತಾರೆ. ಕೇವಲ ಹವಾಯಿ ಚಪ್ಪಲಿಯಲ್ಲಿ, ಚಳಿ – ಮಳೆಯನ್ನು ತಡೆಯದ ಅತಿ ಸಾಮಾನ್ಯ ಉಡುಗೆಯಲ್ಲಿ ವೃದ್ಧರಾದಿಯಾಗಿ ಸಾಲುಸಾಲಾಗಿ ಈ ಗಂಗಾವ್ರತಕ್ಕೆ ಹೋಗುವುದನ್ನು ಕಂಡು ಬೆರಗಾಗಿದ್ದೇವೆ.

ಇದೀಗ ರೈಲು ಶ್ರೀರಂಗಪಟ್ಟಣಕ್ಕೆ ಬಂದಾಗ ನಮ್ಮೊಂದಿಗೆ ಗುಂಪುಗುಂಪಾಗಿ ಜನರು ಇಳಿದಿದ್ದರು. ಇಡಿಯ ಊರೇ ಪುಷ್ಕರದ ಸಂಭ್ರಮದಲ್ಲಿ ಪಾಲ್ಗೊಂಡಂತ್ತಿತ್ತು. ಪೊಲೀಸರ ಸಂಖ್ಯೆಯೂ ಸಾಕಷ್ಟು ಪ್ರಮಾಣದಲ್ಲಿತ್ತು. ಹೆಚ್ಚು ಬಿಸಿಲೂ ಅಲ್ಲದ ಚಳಿಯೂ ಅಲ್ಲದ ಹಿತವಾದ ವಾತಾವರಣ. ಒಮ್ಮೊಮ್ಮೆ ಮೋಡ ಮುಸುಕಿದಂತೆ. ಯಾವುದೇ ಕ್ಷಣದಲ್ಲಿ ಮಳೆ ಬರಬಹುದಾದ ಭೀತಿ ಇದ್ದುದರಿಂದ ಅನೇಕ ಅಂಗಡಿಗಳು ಟಾರ್ಪಲ್ಲಿನ ಕೆಳಗೆ ಅರಳಿಕೊಂಡಿದ್ದವು. ಕಾವೇರಿಯ ಸನಿಹಕ್ಕೆ ಹೋಗುವಾಗ ಭವ್ಯವಾದ ಶ್ರೀರಂಗನಾಥನ ದೇವಾಲಯದ ಮುಂದಿನಿಂದಲೇ ಹಾದುಹೋದೆವು. ಅಬ್ಬ! ದರುಶನಕ್ಕೆ ಅದೆಷ್ಟು ಮಂದಿ... ಸಾಲುಗಟ್ಟಿ ನಿಂತಿದ್ದರು. ಸ್ನಾನದ ನಂತರ ನಮಗೆ ದರುಶನದ ಭಾಗ್ಯ ಸಿಕ್ಕೀತೋ, ಇಲ್ಲವೋ ಎಂಬ ಅನುಮಾನ ಕಾಡತೊಡಗಿತ್ತು. ಮೊದಲು ಪುಷ್ಕರದಲ್ಲಿ ಮಿಂದು, ಪೂಜೆ, ತರ್ಪಣದ ನಂತರ ಆ ಯೋಚನೆಯಷ್ಟೆ

ಎಂದುಕೊಂಡು ನದಿಯ ತಟದತ್ತ ಹೆಜ್ಜೆ ಹಾಕಿದ್ದೆವು. ಸಾಕಷ್ಟು ದೂರವಿರುವಾಗಲೆ, ಮೈಕಿನಲ್ಲಿ ಸುರಕ್ಷತೆಯ ಬಗ್ಗೆ, ಸ್ವಚ್ಛತೆಯ ಬಗ್ಗೆ ಸೂಚನೆಗಳು ಕೇಳಿಬರತೊಡಗಿದ್ದವು. ಹೊಳೆಯಲ್ಲಿ ಸಾಕಷ್ಟು ಸೆಳವು ಇರುವುದರಿಂದ ಎಚ್ಚರಿಕೆಯಿಂದ ಇರಬೇಕೆಂದೂ ವೃದ್ಧರೂ, ಮಕ್ಕಳ ಬಗ್ಗೆ ಹೆಚ್ಚಿನ ಗಮನ ವಹಿಸಬೇಕೆಂದೂ ಪದೇ ಪದೇ ಎಚ್ಚರಿಸುತ್ತಿದ್ದರು. ಹತ್ತಿರ ಹೋಗುತ್ತಿದ್ದಂತೆ ಪೂಜಾ ಸಾಮಾನುಗಳು, ಬಾಗಿನದ ಮೊರಗಳ ಅಂಗಡಿಗಳ ಸಾಲು ಸಾಲೇ ಇದ್ದವು. ಸಂಕಲ್ಪ, ಪೂಜೆ, ತರ್ಪಣ ಮಾಡಿಸುತ್ತೀರಾ ಎಂದು ತೆಲುಗಿನಲ್ಲೇ ಕೇಳುವ ಪುರೋಹಿತರು, ಬಾಗಿನಕ್ಕಾಗಿ ಕಾದುಕುಳಿತ ಕೆಲವು ಮಹಿಳೆಯರು, ದೇವರ ನಾಮ ಪಠಿಸುತ್ತಾ, ದೇವರ ನಾಮ ಹೇಳಿಕೊಳ್ಳುತ್ತಾ ಹೊಳೆಯಲ್ಲಿ ಮುಳುಗು ಹಾಕುವವರು, ಬಂಡೆಯ ಮೇಲೆ ಕುಳಿತು, ಖುಷಿಯಿಂದ ಆಟವಾಡುತ್ತಾ ನೀರು ಹಾಕಿಕೊಳ್ಳುತ್ತಿರುವ ಮಕ್ಕಳು; ಎಲ್ಲೆಡೆ ನೋಟ ಹರಿಸುತ್ತಾ, ಕಾವೇರಿಯತ್ತ ದೃಷ್ಟಿ ಹರಿಸಿದಾಗ ಅತ್ಯಂತ ಸಂತಸವೆನಿಸಿತ್ತು. ಸ್ಫಟಿಕದಂತೆ ಶುಭ್ರವಾಗಿ ಹರಿಯುತ್ತಿರುವ ನೀರು ನೋಡುತ್ತಿದ್ದಂತೆ ಮನಸ್ಸಿಗೆ ಹಿತವೆನಿಸುವ ಉಲ್ಲಾಸ; ಇಂತಹ ಒಳ್ಳೆಯ ನೀರನ್ನು ನಾವೆಷ್ಟು ಹಾಳು ಮಾಡುತ್ತೇವಲ್ಲ ಎಂಬ ಬೇಸರ ಬಾಧಿಸತೊಡಗಿತ್ತು. ಪುಟ್ಟ ಮಕ್ಕಳ ಸ್ವಚ್ಛಂದ ನೀರಾಟ ಕಂಡು, ನೀರಿಗಿಳಿಯಲು ಕಾಡುತ್ತಿದ್ದ ಹಿಂಜರಿಕೆ, ಭಯ ಮಾಯವಾಗಿತ್ತು. ನೀರಿಗಳಿದ ಮೇಲೆ ಚಳಿ ಏನು, ಮಳೆ ಏನು ಎಂಬಂತಹ ಉತ್ಸಾಹ, ಸುತ್ತ ಅದೆಷ್ಟು ಮಂದಿ ಪುಣ್ಯ ಸ್ನಾನ ಮಾಡುತ್ತಿದ್ದಾರೆ. ಹೇಗೆ ಭಾರತೀಯರು ಇಂತಹ ನಂಬಿಕೆ, ಶ್ರದ್ಧೆಯಿಂದಲೇ ಒಂದಾಗಿದ್ದಾರೆ. ಎಲ್ಲ ಮುಖಗಳಲ್ಲೂ ಸಾರ್ಥಕತೆಯ ಭಾವ...ಕಾವೇರಿ ತಾಯಿ... ನೀನೇಕೆ ತುಂಬಿಕೊಂಡಿಲ್ಲಮ್ಮ ಎಂದು ಕೊಳ್ಳುತ್ತಿರುವಾಗಲೇ ವರುಣ ದೇವನ ಕೃಪೆಯಾಗಿದೆ... ನಮ್ಮೆಲ್ಲರ ಚಿಂತೆಯೂ ದೂರವಾಗಿದೆ. ಆದರೆ ಆಕೆಯ ಪಾವಿತ್ರ್ಯ ರಕ್ಷಿಸುವ ನಮ್ಮೆಲ್ಲರ ಹೊಣೆ ಕಾರ್ಯಗತವಾಗಬೇಕಿದೆ.

ಮಿಂದು, ಅರಿಶಿನ-ಕುಂಕುಮದ ಪೂಜೆ ಮಾಡಿ ಆಯಿತು, ಬಟ್ಟೆ ಬದಲಿಸಲು ಮಾಡಿರುವ ವ್ಯವಸ್ಥೆ ... ತಾತ್ಕಾಲಿಕವಾಗಿ ನಿರ್ಮಿಸಿದ ಜಿಂಕ್‌ಶೀಟ್‌ನ ಸಣ್ಣ ಸಣ್ಣ ಕೋಣೆಗಳು, ಅದಾಗಲೇ ಬಿದ್ದು ಗಾಳಿಗೆ ಸದ್ದು ಮಾಡುತ್ತಿರುವ ನಾಲ್ಕಾರು ಶೀಟುಗಳು, 'ಅದ್ರೊಳಗೆ ಹೋಗ್ಬೇಡಿ ... ಶೀಟು ಬಿದ್ದೀತು... ಮರೆಯಾಗಿ ನಿಂತ್ಕೊಂಡು, ಬಟ್ಟೆ ಬದಲಾಯಿಸಿಕೊಳ್ಳಿ' ಎಂದು ಹಿರಿಯ ಮಹಿಳೆಯರು ಸಲಹೆಯಿತ್ತಿದ್ದರು.

ಬಾಗಿಲಿನ ಚಿಲಕವೂ ಸರಿಯಿರಲಿಲ್ಲ. ಚೂಪು ಮೊಳೆ ಚರ್ಮ ಕೀಳುವಂತಿತ್ತು. ಮಾಡುವ ವ್ಯವಸ್ಥೆ ಸಮರ್ಪಕವಾಗಿ ಮಾಡಬಾರದೇಕೆ ಎಂಬ ಪ್ರಶ್ನೆಯೂ 'ಹಣ ಉಳಿಸಲು ಮಾಡಿದ ಕಣ್ಣುಕಟ್ಟಿನ ಕೆಲಸ' ಎಂಬ ಉತ್ತರವೂ ಮನಸ್ಸಿಗೆ ಬಂದಿತ್ತು.

ಇನ್ನು ಸ್ನಾನ ಮಾಡಿದ ಬಟ್ಟೆಗಳನ್ನು ಹಾಗೇ ಬಿಟ್ಟು ಹೋದರೆ ಗ್ರಹಚಾರ ಪರಿಹಾರವೆಂಬ ನಂಬಿಕೆ ಹೆಚ್ಚಿನವರದು. ಎಂತಹ ಸೂಚನೆಗಳೂ ಅವರ ನಂಬಿಕೆಗಳನ್ನು ವಿಚಲಿತವಾಗಿಸದು.

ನದಿಯ ದಂಡೆಯ ಕೆಲವು ಕಡೆಗಳಲ್ಲಿ ಒದ್ದೆಬಟ್ಟೆಗಳ ರಾಶಿ ರಾಶಿ. ಸತತವಾಗಿ ಅವುಗಳನ್ನು ಗುಡಿಸಿ ಗುಡ್ಡೆ ಹಾಕಲು ಕೆಲವು ಮಹಿಳೆಯರನ್ನು ನಿಯೋಜಿಸಲಾಗಿತ್ತು. ಬಟ್ಟೆಗಳನ್ನು ಹಾಗೆ ರಾಶಿ ಹಾಕುವುದರ ಬದಲಾಗಿ, ಚೆನ್ನಾಗಿ ಒಗೆದು, ಒಣಗಿಸಿ, ಅವಶ್ಯಕತೆಯಿದ್ದವರಿಗೆ ಕೊಟ್ಟರೆ ನಿಜವಾಗಿ ಉಪಯೋಗವಾದೀತು! ಹೀಗೆ ರಾಶಿಗಟ್ಟಲೆ ಒದ್ದೆ ಬಟ್ಟೆಗಳು ಇಲ್ಲಿ ಉಪಯೋಗವಾದಾವೆ? ಮಾಡಿರುವ ಪಾಪ ವಿಮುಕ್ತಿಯಾಗುತ್ತದೆ ಎಂಬ ವಿಶ್ವಾಸದಿಂದ ಮೀಯುವವರು ಹಲವರು. ಪುಷ್ಕರದಲ್ಲಿ ಮಿಂದು, ಪಾವನವಾದವರೆಲ್ಲರೂ, ಮುಂದೆಂದೂ ಪಾಪ ಮಾಡದಂತೆ ನಿರ್ಧಾರ ಮಾಡಿದರೆ ಈ ನಾಡೇ ಪುಣ್ಯದ ನಾಡಾದೀತಲ್ಲವೆ?

ಇನ್ನು ಪೂಜೆ ಮಾಡಿ ನಾಣ್ಯವನ್ನು ನದಿಗೆ ಹಾಕುವವರು ಕೆಲವರು, ಅಚ್ಚರಿಯ ಸಂಗತಿಯೆಂದರೆ ಒಂದಿಬ್ಬರು ಮಹಿಳೆಯರು, ಬಾಲಕರು ಆ ನೀರಿನಲ್ಲಿ ಈಜುತ್ತಾ, ನೀರಿನಲ್ಲಿ ಬಿದ್ದ ನಾಣ್ಯಗಳನ್ನು ಆಯ್ದು ತೆಗೆದುಕೊಳ್ಳುತ್ತಿದ್ದರು. ಇನ್ನು ನಮ್ಮಂತಹ ಸಾಮಾನ್ಯರು, ಪಾಪವೇ ಮಾಡಬಾರದು ಎಂದುಕೊಳ್ಳುವುದಕ್ಕಿಂತ, ಪಾಪ ಮಾಡಿದರೂ ಬೇರೊಂದು ನದಿಗೆ ಮುಂದಿನ ವರ್ಷ ಪುಷ್ಕರ ಬರುತ್ತದಲ್ಲ... ಆಗ ಪಾಪ ಕಳೆದುಕೊಳ್ಳಲು ಹೋದರಾಯಿತು ಎಂದು ಯೋಚಿಸಿ ಸುಮ್ಮನಾಗುತ್ತೇವೆಯೆ? ಹಾಗೆಯೇ ಪುಷ್ಕರದಲ್ಲಿ ಪಿತೃಕಾರ್ಯ, ತರ್ಪಣಗಳಿಂದ ಪಿತೃಗಳನ್ನು ಸಂತೋಷಪಡಿಸಿ ಅವರಿಗೆ ಮುಕ್ತಿಕೊಡಿಸುವುದರ ಮೂಲಕ ಹಿರಿಯರ ಆಶೀರ್ವಾದವನ್ನು ಗಳಿಸಿಕೊಳ್ಳುವ ಸದುದ್ದೇಶ.

ತಮ್ಮ ತಾಯಿ ತಂದೆಯರು ಬದುಕಿದ್ದಾಗ ಸರಿಯಾಗಿ ನೋಡಿಕೊಳ್ಳದಿದ್ದವರಿಗೂ ಅವರು ಪರಲೋಕಕ್ಕೆ ಹೋದ ನಂತರ ಪಿತೃಕಾರ್ಯವನ್ನು ಸರಿಯಾಗಿ ಮಾಡಿ ಸಂತೃಪ್ತಿಗೊಳಿಸುವ ಇರಾದೆ. ಇವೆಲ್ಲಕ್ಕಿಂತ ಮಿಗಿಲಾಗಿ ಕಾವೇರಿಯ ಪುಷ್ಕರದ ಸಂಭ್ರಮವನ್ನು ಕಣ್ಣಾರೆ ಕಾಣುವ ಸುಯೋಗ. ಪರಹಿತಕ್ಕಾಗಿಯೇ ತಲಕಾವೇರಿಯಿಂದ ಬಂಗಾಳಕೊಲ್ಲಿಯವರೆಗೂ ಹರಿಯುತ್ತಿರುವ ಆಕೆಯ ವಿಷಯದಲ್ಲಿ ಕಲಹವಾಡುತ್ತಾ, ಕಾವೇರುವಂತೆ ಕಿತ್ತಾಟ ಮಾಡುತ್ತಾ, ಪದೇ ಪದೇ ಆಕೆಯ ವಿಷಯವಾಗಿ ಕೋರ್ಟಿಗೆ ಎಡತಾಕುತ್ತಾ ಇರುವ ಬಗ್ಗೆ ಮುನಿದು ಕಾವೇರಿ ಒಂದೊಮ್ಮೆ ಮಾಯವಾಗಿಬಿಟ್ಟರೆ ... ದೆಸೆ ಬದಲಿಸಿಬಿಟ್ಟರೆ... ಮಮತಾಮಯಿಯ ಸಹನೆಯನ್ನು ಕೆಣಕುವಂತೆ ಮಲಿನ ಮಾಡುತ್ತಿರುವುದನ್ನು ಸೈರಿಸಲಾರದೆ ಗುಪ್ತಗಾಮಿನಿಯಾಗಿಬಿಟ್ಟರೆ... ಸಪ್ತ ಪುಣ್ಯ ನದಿಗಳಲ್ಲಿ ಒಬ್ಬಳಾದ ಕಾವೇರಿಯ ತಾಳ್ಮೆ ಸಡಿಲವಾದರೆ... ಇಲ್ಲ... ಇಲ್ಲ... ಹಾಗಾಗದಂತೆ ನಾವೆಲ್ಲರೂ ಎಚ್ಚರಿಕೆ ವಹಿಸಬೇಕು. ಕಾವೇರಿಯ ಶ್ರೀರಕ್ಷೆ ನಮಗೆಂದಿಗೂ ಬೇಕೇ ಬೇಕು. ಅವಳಿಲ್ಲದೆ ನಾವೆಲ್ಲಿ...

ಒಂದು ಗಂಟೆ ಸರತಿಯಲ್ಲಿ ನಿಂತು ಶ್ರೀರಂಗನಾಥನ ದರ್ಶನವನ್ನೂ ಪಡೆದು, ಕಾವೇರಿಯನ್ನೇ ನೆನೆಯುತ್ತಾ ಮನೆಗೆ ಮರಳಿದ್ದೆವು. ಎಲ್ಲಾ ಕಡೆಗಳಲ್ಲೂ ಪೋಲೀಸರು ಭಕ್ತರೊಂದಿಗೆ ಸ್ನೇಹದಿಂದ ನಡೆದುಕೊಂಡಿದ್ದು ಸಮಾಧಾನವೆನಿಸಿತ್ತು.